# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ|| ಮಾಘ ಮಾಸ — ಸಂಪುಟ - ೨೦

ಫೆಬ್ರವರಿ - ೨೦೦೫ — ಸಂಚಿಕೆ - ೦೨


## Don’t expect, be happy

### In India, the customer is clearly no king

I BELIEVE the Americans invented the phrase’ The customer is king”. I walked to the cashier’s counter in a store in New York. The lady asked to me to find myself another counter. I went over to two other counters and got the same reply. I asked to see the store manager. The cashier and the manager went into a heated debate. The lady was packing up because her duties were about to end in an hour. “Unless you pay me extra dollars to stay longer, I am gone! “I settled my dues on the fourth counter.

In India, mercifully, we have not embraced this concept. Else, our sudden expectations of service would have constantly frustrated us. A common man has to rely for most services on the state. He makes three trips to the ration store. He needs to queue up for about an hour a week. He queues up to settle his electricity bill. He rushes into the bus because the conductor never takes his hands off the bell. He has learnt to cope with rude behaviour of people whom he has pay for their services.

One day, my wife bought herself an ordinary top from a designer store. And I bought a wall clock for the bedroom. After the first wash, my wife’s top had changed colours and





also shrunk. We had studied the label, which read “Wash in cold water”. The store’s response, “You should not have washed it; nowwe can do nothing”. My clock stopped. The shopkeeper’s defence, “this clock is not covered by any guarantees from the manufacturers.”

Friends enticed by an advertisement from a reputed travel agency, said to me, “it is cheaper to go to Malaysia and Thailand than to Goa!” On their return, their final cost was 40 per cent higher than was quoted.

Hotels, airlines and banks all run loyalty programmes to retain their customers. I was sent a two-nights-free-stay voucher from a hotel chain for being loyal for two years. The offer was valid only in off-season, when no paying customer would come. My room was on a floor where structural repairs were being undertaken. The noise continued until 10 pm on both nights.

When asked for my entitlement to a free ticket from a domestic airliner I was told that particular flight was full. I needed to go and the smart girl at the booking counter suggested I buy the ticket. I got the seat.

Another friend bought a new car. She drove out of the showroom some 30 kms to suddenly face the fierce onslaught of rains. Her wipers did not work. She called them from her mobile. “Today is Saturday. Please call us on Monday”.

We Indians have created our own definition of service. “You pay me for what I give you. No complaints afterwards - please”, reads a notice in a store. *

# ಅಧ್ಯಕ್ಷ ನುಡಿ



ಸಂಘದ 58ನೇ ಸರ್ವಸದಸ್ಯರ ಸಭೆಯು ಮೈಸೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ಸಭೆಯು ಎಲ್ಲ ಪ್ರಕಾರದ ಅಭಿಪ್ರಾಯಗಳನ್ನೂ ಚರ್ಚಿಸಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಕೆಲವು ನಿರ್ಧಾರಗಳನ್ನೂ ಕೈಗೊಂಡಿತು. ಸದಸ್ಯಬಾಂಧವರ ಇದೇ ರೀತಿಯ ಸಹಕಾರವನ್ನುಸಂಘವು ಸದಾ ಬಯಸುತ್ತದೆ.

ಸಂಘವು ಪ್ರಕಟಿಸಿರುವ ಹಾಗೂ ಈ ಸಭೆಯಲ್ಲಿ ಬಿಡುಗಡೆಯಾದ ನೂತನ ವಿಳಾಸ ಪುಸ್ತಕವು ಬೆಂಗಳೂರು ಮತ್ತು ಮೈಸೂರಿನ ಸಂಘದ ಕಾರ್ಯಾಲಯದಲ್ಲಿ ಲಭ್ಯವಿದೆ. ರೂ. 50/-ರ ಬೆಲೆಯ ಈ ಪುಸ್ತಕವನ್ನು ಎಲ್ಲ ಬಾಂಧವರೂ ಕಾರ್ಯಾಲಯಕ್ಕೆ ಬಂದು ಕೊಳ್ಳಲು ವಿನಂತಿಸಲಾಗಿದೆ.

ಸಂಘವು ಉದ್ದೇಶಿಸಿರುವ ವೃದ್ಧಾಶ್ರಮದ ನಿರ್ಮಾಣಕ್ಕೆ ಸುಮಾರು ರೂ. 12-15 ಲಕ್ಷ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಮಾನ್ಯ ಬಾಂಧವರೆಲ್ಲರೂ ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿವಹಿಸಿ, ತಮ್ಮ ಸಲಹೆ, ಸಹಕಾರ ಮತ್ತು ಕೊಡುಗೆಗಳನ್ನು ನೀಡಲು ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ. ಸಮುದಾಯಕ್ಕೆ ಸಾರ್ಥಕ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ಇಂತಹ ಯೋಜನೆಗಳನ್ನು ತಾವೆಲ್ಲರೂ ಹೃತ್ಪೂರ್ವಕವಾಗಿ ಬೆಂಬಲಿಸುತ್ತೀರೆಂಬ ವಿಶ್ವಾಸ ನನ್ನದು.

ಸಂಘದ ಹಿಂದಿನ ಅಧ್ಯಕ್ಷರಾಗಿದ್ದ ಹಾಗೂ ಹಾಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಡಾ|| ಧ್ರುವನಾರಾಯಣ್‌ರವರು ನಿಧನ ಹೊಂದಿದ ವಾರ್ತೆ ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರೋಣ. ಇವರ ಅಗಲಿಕೆಯಿಂದ ಸಂಘಕ್ಕೆ ತುಂಬಲಾರದ ನಷ್ಟವುಂಟಾಗಿದೆ.

**- ಎಂ ನರಸಿಂಹನ್**





# ಕಾರ್ಯದರ್ಶಿ ಕಾಲಂ



ಹಲವಾರು ಏಳು ಬೀಳುಗಳನ್ನು ಕಂಡ ನಿಮ್ಮ ಸಂಘವು ಈಗ 60 ವರ್ಷಗಳನ್ನು ಕಂಡ ಹರುಷದಲ್ಲಿದೆ. ಯಾವುದೇ ಸಂಘವು ಸತತವಾಗಿ ಅರವತ್ತು ವರ್ಷಗಳ ಸೇವೆಯಲ್ಲಿ ತೊಡಗಿರುವುದು ಸಾಧನೆಯೇ ಸರಿ. ಸಂಘದ ವಜ್ರಮಹೋತ್ಸವವನ್ನು ಈ ವರ್ಷದ ಅಂತ್ಯದ ವೇಳೆಗೆ ಅದ್ದೂರಿಯಿಂದ ಆಚರಿಸಬೇಕೆಂಬ ಹಂಬಲ ನಮ್ಮೆಲ್ಲರದು. ಇದೇ ಸಂದರ್ಭದಲ್ಲಿ ನಾಡಿನ ಹಾಗೂ ಸಾಗರದಾಚೆ ವ್ಯಾಪಿಸಿರುವ ನಮ್ಮ ಜನಾಂಗದವರನ್ನೆಲ್ಲ ಒಂದೇ ವೇದಿಕೆಯಲ್ಲಿ ಸೇರಿಸುವ ನಿಟ್ಟಿನಲ್ಲಿ **ವಿಶ್ವ ಸಂಕೇತಿ ಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.** ಕನಿಷ್ಠ 2000 ಬೆಟ್ಟದಪುರ ಸಂಕೇತಿ ಬಾಂಧವರನ್ನು ಕಲೆಹಾಕುವ ಗುರಿ ನಮ್ಮದು. ಈ ಎರಡೂ ಕಾರ್ಯಕ್ರಮಗಳ ರೂಪು-ರೇಷೆಗಳನ್ನು ಕ್ರಮೇಣ ತಿಳಿಸಲಾಗುವುದು. ನಿಮ್ಮೆಲ್ಲರ ಅಭೂತಪೂರ್ವ ಸಹಕಾರ ಅತ್ಯವಶ್ಯಕ ಎಂಬುದನ್ನು ಒತ್ತಿ ಹೇಳಬೇಕಿಲ್ಲವಷ್ಟೆ.

ಸಂಗೀತ ಪಿತಾಮಹ ಪುರಂದರ - ತ್ಯಾಗರಾಜರ ಆರಾಧನಾ ಮಹೋತ್ಸವಗಳು ಬೆಂಗಳೂರು ಹಾಗೂ ಮೈಸೂರಿನಲ್ಲಿ ಶಾಖಾ ಸಮಿತಿಗಳ ನೇತೃತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿವೆ. ಎರಡು ಸಮಿತಿಗಳಿಗೂ ಹಾಗೂ ಭಾಗವಹಿಸಿದ ಬಾಂಧವರಿಗೂ ಹೃತ್ಪೂರ್ವಕ ವಂದನೆಗಳು.

**- ಆರ್. ಎಸ್. ಭಾಸ್ಕರ ಅವಧಾನಿ**

# ★ ★ ★ ಶುಭ ಸಮಾಚಾರಗಳು ★ ★ ★

## ಸಂಕ್ರಾಂತಿ ಸಂಗೀತೋತ್ಸವ

| ತಾರೀಖು | |
|---|---|
| 15.01.05ರಿಂದ<br>17.01.05ರವರೆಗೆ<br>ಬೆಂಗಳೂರು | ವಿ|| ಆರ್.ಕೆ. ಶ್ರೀಕಂಠನ್ ಟ್ರಸ್ಟ್ ಮತ್ತು ಎಂಇಎಸ್ ಕಲಾವೇದಿ ಸಂಸ್ಥೆಗಳಿಂದ 10ನೇ ವಾರ್ಷಿಕ ಸಂಕ್ರಾಂತಿ ಸಂಗೀತೋತ್ಸವ (ಉದ್ಯಾಪನೆ) ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಸಂಗೀತ ಕಲಾಭೂಷಣ ಆರ್. ಕೆ. ನಾರಾಯಣಸ್ವಾಮಿ ಹಾಗೂ ಶ್ರೀಯುತ ಜಿ. ಟಿ. ನಾರಾಯಣರಾವ್ ಅವರುಗಳನ್ನು ಸನ್ಮಾನಿಸಲಾಯಿತು. ಇದಾದ ನಂತರ ವಿ|| ಆರ್ ಕೆ ಶ್ರೀಕಂಠನ್ ಅವರ ಶಿಷ್ಯರುಗಳಿಂದ ಪಿಟೀಲು ವಾದನ ನಡೆಯಿತು. ಇದೇ ಸಂದರ್ಭದಲ್ಲಿ ವಿದ್ವಾನ್ ಆರ್.ಕೆ. ಶ್ರೀಕಂಠನ್ ಅವರ 85ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು. |

## ಹುಟ್ಟುಹಬ್ಬ

| ತಾರೀಖು | ಹೆಸರು |
|---|---|
| 16.01.05<br>ಬೆಂಗಳೂರು | **ಚಿ|| ಶ್ರೇಯಾ ರುದ್ರಪಟ್ಟಣ**<br>ಇವಳ 5ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಚಿ||ಯು ಹಾಲಿ ಅಮೇರಿಕದಲ್ಲಿರುವ ಶ್ರೀಮತಿ ಶಾಲಿನಿ ಮತ್ತು ಶ್ರೀ ಶೇಖರ್ ಅವರ ಪುತ್ರಿ ಹಾಗೂ ನಾಗಪುರದಲ್ಲಿರುವ ಶ್ರೀಮತಿ ಅನಸೂಯ ಮತ್ತು ಶ್ರೀ ಬಿ.ಸಿ. ನಾಗರಾಜ ಮತ್ತು ಶ್ರೀಮತಿ ಲಲಿತಾ ನರಸಿಂಹಯ್ಯ ಅವರುಗಳ ಮೊಮ್ಮಗಳು. |

## ಚೂಡಾಕರ್ಮ :

| ತಾರೀಖು | ಹೆಸರು |
|---|---|
| 09.01.05<br>ಬೆಂಗಳೂರು | **ಚಿ|| ರಜಿತ್ ಆರ್. ಹರವೆ**<br>(ಶ್ರೀಮತಿ ಬಿ.ಎನ್. ಸವಿತ ಮತ್ತು ಶ್ರೀ ರಾಜೀವ್‌ರವರ ಪುತ್ರ. ಶ್ರೀ ಹೆಚ್. ಎಸ್. ರಾಮಸ್ವಾಮಿ ಹಾಗೂ ಬಿ. ಆರ್. ನರಸಿಂಹ ಮೂರ್ತಿರವರ ಮೊಮ್ಮಗ) |





## ಜನವರಿ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

**ಆಜೀವ ಸದಸ್ಯತ್ವ(ರೂ. 100)**

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಕಾರ್ತಿಕ್ ಮೂರ್ತಿ | ಬೆಂಗಳೂರು | 7212 | 1837 |
| ಸೌಮ್ಯ ಸುದರ್ಶನ್ ಎಸ್.ಎಂ. | ಬೆಂಗಳೂರು | 7213 | 1838 |
| ಪುಟ್ಟಣ್ಣ ಎಸ್. ಎಂ. | ಮೈಸೂರು | 7214 | 1839 |
| ಲಕ್ಷ್ಮೀ ಮನೋಜ್ | ಬೆಂಗಳೂರು | 7217 | 1840 |
| ಆರ್.ಎಸ್. ಸತೀಶ್ | ಮೈಸೂರು | 0122 | 1844 |
| ದೀಪಶ್ರೀ ಗದ್ವಾಲ್ | ಮೈಸೂರು | 0123 | 1845 |
| ಎಸ್. ತ್ಯಾಗರಾಜ್ | ಮೈಸೂರು | 0127 | 1846 |
| ಎಂ.ಎಸ್.ವೀಣಾ | ಮೈಸೂರು | 0128 | 1847 |

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್.ರಾಮಸ್ವಾಮಯ್ಯ | ಬೆಂಗಳೂರು | 7221 | 101.00 (ಮೊಮ್ಮಗನ ಚೂಡಾಕರ್ಮ) |
| ಬಿ. ಸಿ. ನಾಗರಾಜ್ | ನಾಗಪುರ | 7222 | 201.00 (ಮೊಮ್ಮಗಳ ಹುಟ್ಟುಹಬ್ಬ) |
| ಸಾವಿತ್ರಮ್ಮ ಶ್ರೀನಿವಾಸಯ್ಯ | ಬೆಂಗಳೂರು | 7224 | 101.00 (ಮಗನ ಮದುವೆ) |
| ಆರ್.ಕೆ. ವೆಂಕಟಕೃಷ್ಣಯ್ಯ | ಬೆಂಗಳೂರು | 7227 | 101.00 (ಮಗನ ಮದುವೆ) |

## ಸಾಲ ರೂಪದ ವಿದ್ಯಾರ್ಥಿ ವೇತನದ ಮರುಪಾವತಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ಎಂ. ಸುದರ್ಶನ್ | ಬೆಂಗಳೂರು | 7220 | 500.00 |

## ವಾರ್ತಾ ಪೋಷಕರು / ಮಹಾಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಡಾ|| ಹೆಚ್.ಎನ್.ರವೀಶ್ | ಬೆಂಗಳೂರು | 7226 | 1,000.00 |
| ಆರ್. ವಿಶ್ವೇಶ್ವರಯ್ಯ | ಮೈಸೂರು | 7287 | 1,000.00 |
| ಪುರೋಹಿತ್ ಆರ್. ಜಯರಾಂ | ಮೈಸೂರು | 7248 | 500.00 (ಮೊದಲ ಕಂತು) |

## ಹಾಸ್ಟೆಲ್ ಅನ್ನದಾನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್. ರಮೇಶ್ | ಮಲೇಶಿಯ | 7215 | 4000.00 (ತಂದೆಯ ನೆನಪು) |
| ಹೆಚ್.ಎಸ್. ರಮೇಶ್ | ಮಲೇಶಿಯ | 7215 | 4000.00 (ತಾಯಿಯ ನೆನಪು) |
| ಆರ್.ಕೆ.ನಂದಕುಮಾರ್ | ಬೆಂಗಳೂರು | 7223 | 400.00 (ಹೆಚ್.ಎಸ್.ಗಂಗಾಧರ ಅವರ 60ನೇ ಹುಟ್ಟುಹಬ್ಬ) |
| ಎಸ್.ಸಿ. ಶ್ರೀನಿವಾಸಮೂರ್ತಿ | ಬೆಂಗಳೂರು | 7225 | 4000.00 (ತಾಯಿಯ ನೆನಪು) |
| ಪ್ರಕಾಶ್ ಎನ್. ರಾವ್ | ಬೆಂಗಳೂರು | 7229 | 400.00 ( ಅಜ್ಜಿಯ ನೆನಪು) |
| ಆರ್.ಎಸ್.ಸುಬ್ರಹ್ಮಣ್ಯ | ಹಾಸನ | 7261 | 10,000.00 |

## ಸಾಲರೂಪ ವಿದ್ಯಾರ್ಥಿವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್.ಎನ್.ಸುಂದರೇಶ್ | ಸೊಲ್ಲಾಪುರ | 7266 | 6000.00 |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಕೆ.ಸತ್ಯಪ್ರಕಾಶ್ | ಬೆಂಗಳೂರು | 7218 | 100.00 |
| ಹೆಚ್.ಕೆ.ಸತ್ಯಪ್ರಕಾಶ್ | ಬೆಂಗಳೂರು | 7269 | 100.00 |
| ಎಲ್. ಅರುಣ್ | ಬೆಂಗಳೂರು | 7270 | 100.00 |
| ಆರ್. ಜಯರಾಂ | ಮೈಸೂರು | 7247 | 50.00 |

**ವಿಳಾಸ ಪುಸ್ತಕಗಳಿಂದ ಬಂದ ಆದಾಯ : 1,700.00**

## ಜನವರಿ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.01.05 ಯುಎಸ್ಎ | ಡಾ|| ಸುಬ್ಬರಾವ್ ಎಸ್.ಸಿ. | ತಂದೆ ಸಾಹುಕಾರ್ ಎಸ್ ಸಿ ಚೆನ್ನಪ್ಪಯ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.01.05 ಬೆಂಗಳೂರು | ರಾಮಸ್ವಾಮಯ್ಯ ಹೆಚ್.ಎಸ್. | ತಂದೆ ಶಾನುಭೋಗ್ ಸುಬ್ಬರಾಯ |
| 01.01.05 ಮೈಸೂರು | ಸರಸ್ವತಿ ಕೆ. ಎನ್. ಗೌರಮ್ಮ, ನಾಗೇಶ್ | |
| 01.01.05 ಬೆಂಗಳೂರು | ಜ್ಯೋತಿ ಛಾರಿಟಬಲ್ ಟ್ರಸ್ಟ್ 6 ದಿನಗಳು | ಜ್ಯೋತಿ |
| 02.01.05 ಬೆಟ್ಟದಪುರ | ಬಿ.ಎಸ್. ಶ್ರೀಧರಮೂರ್ತಿ | ಅಜ್ಜಿ ಭಾಗೀರತಮ್ಮ |
| 05.01.05 ಬೆಂಗಳೂರು | ಶಕುಂತಲ ವೆಂಕಟಕೃಷ್ಣಪ್ಪ | ಆರ್. ವೆಂಕಟಸುಬ್ಬಯ್ಯ (ಪಿತಾಮಹ) |
| 06.01.05 ಬೆಂಗಳೂರು | ರಾಮಸ್ವಾಮಿ ಬಿ. ಎಸ್. | ತಾಯಿ ಕಮಲಾ ಶ್ರೀನಿವಾಸಯ್ಯ |
| 08.01.05 ಬೆಂಗಳೂರು | ಶಾಮಣ್ಣ ಆರ್. ಎನ್. | ತಂದೆ ನಾರಣಪ್ಪ |
| 08.01.05 ಯುಎಸ್ಎ | ರಾಮಚಂದ್ರ ಮತ್ತು ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 08.01.05 ಬೆಂಗಳೂರು | ಚಂದ್ರಶೇಖರ್ ಮತ್ತು ಮಕ್ಕಳು | ಶಾರದಮ್ಮ |
| 08.01.05 ವಾರಣಾಸಿ | ಸುವರ್ಣ ಆರ್.ಎಸ್. | ತಾಯಿ ಪಾರ್ವತಮ್ಮ ಚಂದ್ರಶೇಖರಯ್ಯ |
| 10.01.05 ಬೆಂಗಳೂರು | ನಟರಾಜ್ ವಿ. | ತಾಯಿ ಮೀನಾಕ್ಷಮ್ಮ |
| 10.01.05 ಬೆಂಗಳೂರು | ಹೇಮಲತಾ ಶ್ರೀವತ್ಸನ್, ನಟರಾಜ್, ಶ್ರೀಧರ್ | ತಂದೆ ಹೆಚ್.ಎಸ್.ಕೃಷ್ಣಪ್ಪ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 11.01.05 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಕಾಲಭೈರವನ್‌ರವರ ಹುಟ್ಟುಹಬ್ಬ |
| 12.01.05 ಬೆಂಗಳೂರು | ವೈದ್ಯನಾಥ ಆರ್.ಜಿ. | ತಂದೆ ಆರ್ ಎಸ್ ಗುಂಡು ರಾಮಯ್ಯ |
| 14.01.05 ಯುಎಸ್‌ಎ | ಕು।। ಚಂದ್ರಿಕಾ | ಆರ್.ಕೆ.ಶ್ರೀಕಂಠನ್‌ರವರ ಹುಟ್ಟುಹಬ್ಬ |
| 14.01.05 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳ ಕಾರ್ಯ ಸಮಿತಿ | |
| 15.01.05 ಬೆಂಗಳೂರು | ಕೇಶವ ಮೂರ್ತಿ ಬಿ.ಆರ್. | ತಂದೆ ರಾಮಸ್ವಾಮಿ |
| 15.01.05 ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ಶ್ರೀಮತಿ ಪುಟ್ಟಮ್ಮ (ಪಿರಿಯಾಪಟ್ಟಣ) |
| 16.01.05 ಬಾಂಬೆ | ಡಾ।। ಶ್ಯಾಮಸುಂದರ್ ಆರ್.ಕೆ. | ತಾಯಿ ವಿಶಾಲಾಕ್ಷಿ ಆನಂದರಾಮಯ್ಯ |
| 17.01.05 ಬೆಂಗಳೂರು | ಹೆಚ್.ಎಸ್. ರಮೇಶ್ | ತಂದೆ ಹೆಚ್. ಎಸ್. ಸೂರ್ಯನಾರಾಯಣ |
| 18.01.05 ಬೆಂಗಳೂರು | ಲೆ. ಕರ್ನಲ್ ಬಿ.ವಿ.ಎಸ್. ರಾವ್ | ಮಲ್ಲಿಕಾರಾವ್‌ರವರ ಹುಟ್ಟುಹಬ್ಬ |
| 24.01.05 ಬೆಂಗಳೂರು | ಆರ್.ಕೆ. ನಂದಕುಮಾರ್ | ಹೆಚ್.ಎನ್.ಗಂಗಾಧರ್ ರವರ 60ನೇ ಹುಟ್ಟುಹಬ್ಬ |
| 25.01.05 ಹಾಸನ | ಸುಬ್ರಹ್ಮಣ್ಯ ಆರ್. | ತಂದೆ ರಂಗಸ್ವಾಮಿ ಆರ್.ಎಸ್. |
| 25.01.05 ಮೈಸೂರು | ಸಾವಿತ್ರಮ್ಮ | ಮಗ ಕೆ.ವಿ. ಅನಂತ ಸುಬ್ರಹ್ಮಣ್ಯ |
| 26.01.05 ಬೆಂಗಳೂರು | ಲಲಿತಾಂಬ ಬಿ.ಜಿ. | ಅವರ ಹುಟ್ಟುಹಬ್ಬ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 26.01.05 ಬೆಂಗಳೂರು | ಸುಬ್ರಹ್ಮಣ್ಯ ಆರ್.ಜಿ. | ತಂದೆ ಆರ್. ಗೋಪಾಲಯ್ಯ |
| 28.01.05 ಬಾಂಬೆ | ಗಂಗಾಧರ ಹೆಚ್.ಎನ್. | ತಾಯಿ ಸಾವಿತ್ರಮ್ಮ |
| 31.01.05 ಬೆಂಗಳೂರು | ಸೂರ್ಯನಾರಾಯಣ ಆರ್.ಕೆ. | ಮಗಳು ಮೈಥಿಲಿ ಶಿವರಾಂ ಹುಟ್ಟುಹಬ್ಬ |

## ಪ್ರಕಟಣೆ

ಬೆಟ್ಟದಪುರ ಶ್ರೀ ಶಿಡ್ಲು ಮಲ್ಲಿಕಾರ್ಜುನ ಸ್ವಾಮಿ ಬ್ರಹ್ಮರಥೋತ್ಸವವು ಮಾಘ ಶುದ್ಧ ಪೂರ್ಣಿಮೆ ದಿನಾಂಕ 24.02.2005ರ ಗುರುವಾರದಂದು ನಡೆಯಲಿದೆ. ತತ್ಸಂಬಂಧ ದಿನಾಂಕ 23.02.2005ರಿಂದ 26.02.2005ರವರೆಗೆ ಉತ್ಸವಾದಿಗಳು ನಡೆಯಲಿದೆ. ಆಸ್ತಿಕ ಮಹಾಶಯರೆಲ್ಲರೂ ಭಾಗವಹಿಸಿ ಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

ಪ್ರತಿ ನಿತ್ಯವೂ ಅನ್ನ ಸಂತರ್ಪಣೆ ನಡೆಯಲಿದೆ. ವಸತಿ ಸೌಕರ್ಯವೂ ಸಹ ಇರುತ್ತದೆ.

ಗ್ರಾಮಕ್ಕೆ ಮೈಸೂರು ಕಡೆಯಿಂದಲೂ ಹಾಗೂ ಹಾಸನ ಕಡೆಯಿಂದಲೂ ಬಸ್ಸಿನ ಸೌಕರ್ಯವಿರುತ್ತದೆ.

## ಶ್ರದ್ಧಾಂಜಲಿ

04.02.05 **ಡಾ।। ಹೆಚ್. ಎಸ್. ಶಶಿಧರ್, 63 ವರ್ಷ,**
ಅಮೇರಿಕ **ವಾಧೂಲಸ ಗೋತ್ರ**

09.02.05 **ಡಾ।। ಎಸ್. ಧ್ರುವನಾರಾಯಣ್, 83 ವರ್ಷ,**
ಬೆಂಗಳೂರು **ಸಂಕೃತಿ ಗೋತ್ರ**

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಆರೋಗ್ಯ ಪ್ರಕಾಶ

### ಆಪರೇಷನ್ನಿನ ಅಭಿಶಾಪದಿಂದ ಕಾಪಾಡಿಕೊಳ್ಳಿ

ಪ್ರೊ. ಎಲೆಂಜೊ ಕ್ಲಾರ್ಕ (ಎಂ.ಡಿ.) ಇವರು ಹೇಳಿದ್ದಾರೆ :

ನಮ್ಮೆಲ್ಲ ಔಷಧಿಗಳೆಂದರೆ ವಿಷಗಳು, ಪರಿಣಾಮವಾಗಿ ಈ ಔಷಧಿಗಳ ಪ್ರತಿಯೊಂದು ಮಾತ್ರೆಯಿಂದ ರೋಗಿಯ ಜೀವನಶಕ್ತಿಯು ಕ್ಷೀಣಿಸುತ್ತ ಹೋಗುತ್ತದೆ.

ಇಂದು ಅಲ್ಪ-ಸ್ವಲ್ಪ ಮಾತಿನಲ್ಲಿ ಆಪರೇಷನ್ ಮಾಡಿಕೊಳ್ಳುವ ಸಲಹೆ ನೀಡುವರು. ಯಾವುದೇ ವಾಹನದ ಮೆಕ್ಯಾನಿಕೂ ಸಹ ನಮಗೆ, ''ಈ ಪಾರ್ಟು ಬದಲಿ ಮಾಡಿದರೂ, ನಿಮ್ಮ ವಾಹನವು ಸರಿಯಾಗುವುದೋ, ಇಲ್ಲವೊ ಎಂದು ಹೇಳಲು ಸಾಧ್ಯವಿಲ್ಲ'' ಎಂದಾಗ, ನಾವು ಅವನ ಗ್ಯಾರೇಜಿನಲ್ಲಿ ವಾಹನ ರಿಪೇರಿ ಮಾಡಿಕೊಳ್ಳುವುದಿಲ್ಲ. ಆದರೆ ಆಶ್ಚರ್ಯವೆಂದರೆ, ಸರ್ಜನ್ ಡಾಕ್ಟರರು ಗ್ಯಾರೆಂಟಿ ಕೊಡದಿದ್ದರೂ, ನಾವು ಆಪರೇಷನ್ ಮಾಡಿಕೊಂಡೇ ತೀರುತ್ತೇವೆ !

ಯುದ್ಧದಲ್ಲಿ ಗಾಯಗೊಂಡ ಸೈನಿಕರು ಹಾಗು ದುರ್ಘಟನೆಗೆ ಈಡಾಗಿದ್ದ ರೋಗಿಗಳನ್ನು ಆಪರೇಷನ್ನಿನ ಮೂಲಕ ಗುಣಪಡಿಸಬಹುದು. ಆದರೆ ಪ್ರತಿಯೊಬ್ಬ ರೋಗಿಯ ಉಪಚಾರವನ್ನು ಹದವಾದ ಚೂರಿಯಿಂದ ಮಾಡಿ, ಅವನಿಗೆ ನಿರ್ಬಲರನ್ನಾಗಿ ಮಾಡುವುದು ಮಾನವೀಯ ದೃಷ್ಟಿಯಿಂದ ಅಪರಾಧವೇ ಸರಿ !

ಆಪರೇಷನ್ನಿನ ಮೂಲಕ ಶರೀರದಲ್ಲಿರುವ ವಿಜಾತೀಯ ದ್ರವ್ಯಗಳನ್ನು ತೆಗೆಯುವದಕ್ಕಿಂತಲೂ, ನೀರು-ಮಣ್ಣು-ಸೂರ್ಯಕಿರಣಗಳು-ಶುದ್ಧ ವಾಯುದಂತಹ ಪ್ರಾಕೃತಿಕ ವಸ್ತುಗಳ ನೆರವಿನಿಂದ ಅವುಗಳನ್ನು ಹೊರಗೆ ತೆಗೆಯುವುದು ಸುರಕ್ಷಿತವೂ, ಸುಲಭವೂ ಹೌದು. ಯಾವುದಾದರೂ ಅನುಭವಿ ವೈದ್ಯನ ಸಲಹೆಯನ್ನು ಪಡೆದು ಮತ್ತು ಯೋಗ್ಯವಾದ ವಿಶ್ರಾಂತಿ, ಅನುಕೂಲ ಆಹಾರವನ್ನು ಸರಿಯಾದ ರೀತಿಯಲ್ಲಿ ಸೇವಿಸಿಯೂ ಪೂರ್ಣ ಆರೋಗ್ಯ ಪಡೆಯಬಹುದು.

### ಎಲ್ಲಿಯವರೆಗೆ ಆಂಗ್ಲ ಔಷಧಿಗಳ ಗುಲಾಮರಾಗಿರುವುದು ?

ನಿಜವಾದ ಆರೋಗ್ಯವು ಔಷಧಿಗಳಿಂದ ಸಿಗುವುದಾದರೆ, ಯಾವ ಡಾಕ್ಟರ್‍ರೂ ಕೆಮಿಸ್ಟೂ ಅಥವಾ ಅವರ ಪರಿವಾರದ ಯಾವ ವ್ಯಕ್ತಿಯೂ ಎಂದಿಗೂ





ಕಾಯಿಲೆಗಳಿಂದ ನರಳುತ್ತಿರಲಿಲ್ಲ. ಆರೋಗ್ಯವನ್ನು ಕೊಂಡುಕೊಳ್ಳುವುದಾದರೆ, ಇಂಜೆಕ್ಷನ್‌ಗಳು, ಯಂತ್ರಗಳು, ದವಾಖಾನೆ ಅಥವಾ ಆಸ್ಪತ್ರೆಯ ವಿಶಾಲ ಕಟ್ಟಡಗಳು ಮತ್ತು ಡಾಕ್ಟರರ ಡಿಗ್ರಿಗಳಿಂದ ಆರೋಗ್ಯವು ಸಿಗುವುದಿಲ್ಲ. ಅದು ಆರೋಗ್ಯದ ನಿಯಮಗಳ ಪಾಲನೆ ಮಾಡುತ್ತಾ ಸಂಯಮ ಜೀವನವನ್ನು ಬಾಳುವುದರಿಂದ ಮಾತ್ರ ಸಿಗುವುದು.

ಅಶುದ್ಧ ಹಾಗೂ ಅಖಾದ್ಯ ಭೋಜನ, ಅನಿಯಮಿತವಾದ ವರ್ತನೆ ಸಂಕುಚಿತ ವಿಚಾರಗಳು ಮತ್ತು ಛಲ-ಕಪಟತನದ ನಡತೆ ಇವೇ ಹಲವು ರೋಗಗಳ ಮೂಲಕಾರಣಗಳು. ಯಾವ ಔಷಧಿಯು ಈ ರೋಗಗಳನ್ನು ಶಾಶ್ವತವಾಗಿ ಗುಣಪಡಿಸಲು ಸಾಧ್ಯವಿಲ್ಲ. ಈ ಔಷಧಿಯು ಸ್ವಲ್ಪ ಸಮಯಕ್ಕಾಗಿ ಒಂದು ರೋಗವನ್ನು ಗುಣಪಡಿಸಿ, ಕೆಲ ಕಾಲದ ನಂತರ ಬೇರಾವದಾದರು ರೋಗವನ್ನು ಹುಟ್ಟಿಸುತ್ತದೆ. ಅಂತೆಯೇ, ಜನಸಾಮಾನ್ಯರು ಈ ಔಷಧಿಗಳ ಗುಲಾಮಗಿರಿಯನ್ನು ತ್ಯಜಿಸಿ, ತಮ್ಮ ಆಹಾರವನ್ನು ಶುದ್ಧ, ವರ್ತನೆಯು ನಿಯಮಿತ, ವಿಚಾರಗಳು ಉದಾರ ಹಾಗೂ ವ್ಯವಹಾರವು ಪ್ರೇಮಮಯವನ್ನಾಗಿ ಇಟ್ಟರೆ, ಅವರು ಯಾವಾಗಲೂ ಆರೋಗ್ಯವಂತ, ಸುಖಿ, ಸಂತುಷ್ಟ ಹಾಗೂ ಪ್ರಸನ್ನರಾಗಿ ಇರುವರು. ಆದರ್ಶ ಆಹಾರ-ವಿಹಾರ ಮತ್ತು ವಿಚಾರ ವ್ಯವಹಾರಗಳು ಸರ್ವಾಂಗೀಣ ಸುಖ-ಸಮೃದ್ಧಿಯ ಬೀಗದ ಕೈಗಳೇ ಸರಿ !

ಶೀತ-ಉಷ್ಣ ಸಹಿಸುವ ಶಕ್ತಿ, ಕಾಮ-ಕ್ರೋಧಗಳನ್ನು ನಿಯಂತ್ರಿಸುವ ಶಕ್ತಿ, ಕಠೋರ ಪರಿಶ್ರಮ ಮಾಡುವ ಕ್ಷಮತೆ, ಸ್ಫೂರ್ತಿ, ಸಹನೆ, ಹಸನ್ಮುಖಿಯಾಗಿರುವುದು, ಹಸಿವು ಸರಿಯಾಗಿರುವುದು, ಶೌಚದಲ್ಲಿ ಸರಳತೆ, ಆಳವಾದ ನಿದ್ದೆ- ಇವೇ ನಿಜವಾದ ಆರೋಗ್ಯದ ಪ್ರಮುಖ ಲಕ್ಷಣಗಳು.

ಡಾಕ್ಟರರ ಉಪಾಯಗಳ ಜನ್ಮದಾತವಾದ ಹಿಪೋಕ್ರೆಟಸ್ ಆರೋಗ್ಯಕರ ಬಾಳಿನ ಬಗ್ಗೆ ಒಂದು ಸುಂದರವಾದ ಮಾತನ್ನು ಹೇಳಿದ್ದಾನೆ :

''ಹೊಟ್ಟೆ ಮೃದು, ಕಾಲುಗಳು ಬೆಚ್ಚಗೆ, ತಲೆಯನ್ನು ತಣ್ಣಗೆ ಇಡಿ ।
ಆತನ ಮನೆಗೆ ರೋಗ ಬಂದರೆ, ಹೊಡೆಯಿರಿ ದೊಣ್ಣೆ ಅವನಿಗೆ ॥''

**– ಸಂಗ್ರಹ : ಹೆಚ್.ಕೆ. ಸತ್ಯಪ್ರಕಾಶ್**

.......ಮುಂದುವರಿಯುವುದು

# ಸಮಾಚಾರ ಸಂಗ್ರಹ

<u>ಅಮೇರಿಕಾ : ಮತ್ತೊಮ್ಮೆ ಬುಷ್ ಅಧಿಕಾರಕ್ಕೆ</u> (20, ಜನವರಿ 05) ಪಿಟಿಐ : ಆಯಮಾನ್ ಅಲ್ ಜವಾಹರಿ, ಅಬುಮುಸಬ್ ಅಲ್‌ಜರ್ಕಾವಿ, ಮೌಲಾನಾ ಮಸೂದ್ ಅಜರ್, ಮೊಹಮದ್ ಅಟ್ಟಾ, ಮುಲ್ಲಾ ಉಮರ್, ಬಿನ್ ಲಾಡೆನ್..... ಇವರೆಲ್ಲರಿಗಿಂತ ನಾವು ಅತಿ ಹೆಚ್ಚು ಅನುಮಾನಿಸುವ ವ್ಯಕ್ತಿ ಬುಷ್. ಯಾವ ನಾಯಕತ್ವ ಗುಣಗಳೂ ಇಲ್ಲ, ಸ್ವಂತ ಅಭಿಪ್ರಾಯಗಳಿಲ್ಲ, ದೂರದೃಷ್ಟಿಯಂತೂ ಇಲ್ಲವೇ ಇಲ್ಲ. ಮೊದಲ ಸಲ ಅಮೇರಿಕಾ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ಅವನಿಗೆ ಭಾರತ-ಪಾಕೀಸ್ತಾನಗಳ ಅಧ್ಯಕ್ಷ-ಪ್ರಧಾನಿಗಳ ಹೆಸರುಗಳೇ ಗೊತ್ತಿರಲಿಲ್ಲ ! ಈ ಪ್ರಪಂಚದಲ್ಲಿರುವ ಯಾವುದೇ ಗುಣಮಟ್ಟದಿಂದ ಅಳತೆ ಮಾಡಿದರೂ ಸಹ ಅವನು ನಿಮಗೆ ವಿಶ್ವನಾಯಕನೆಂದು ಅನಿಸುವುದೇ ಇಲ್ಲ! ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಸದಾಕಾಲವೂ ದ್ವೇಷಕಾರಲಾಗುತ್ತಿದೆ. ಟಿವಿ ಕಾರ್ಯಕ್ರಮಗಳಲ್ಲಿ ಅವನನ್ನು ಅಪಹಾಸ್ಯ ಮಾಡದಿರಲು ಸಾಧ್ಯವೇ ಇಲ್ಲ. ಅವನನ್ನು ಸೋಲಿಸಲೇಬೇಕೆಂದು ಕೆಲವು ಭಾರತೀಯರೂ ಸೇರಿದಂತೆ ಇಡೀ ಪ್ರಪಂಚವೇ ಶ್ರಮವಹಿಸಿತ್ತು. ಎಲ್ಲಾ ರೀತಿಯ ಆರೋಪ-ಅವಮಾನ-ಅಪಹಾಸ್ಯಗಳೆಲ್ಲವನ್ನೂ ಮೀರಿಸಿ ಈಗ ಮತ್ತೊಮ್ಮೆ ಅಧ್ಯಕ್ಷನಾಗಿಯೇಬಿಟ್ಟ! ಈಗ ನಮ್ಮನ್ನು ಕಾಡುವ ಪ್ರಶ್ನೆ: ಅವನನ್ನು ನಾವು ದ್ವೇಷಿಸುವ ಅಗತ್ಯವಾದರೂ ಏನು ? ಇಷ್ಟೆಲ್ಲಾ ಕೆಟ್ಟ ಹೆಸರಿದ್ದರೂ ಅವನು ಗೆದ್ದದ್ದಾದರೂ ಹೇಗೆ ? ಅವನ ತಂದೆಗೆ ಮಾಡಲು ಸಾಧ್ಯವಾಗದ ಕೆಲಸಕ್ಕೆ ಅವನು ಕೈ ಹಾಕಿದ್ದು ನಿಜ. ಇಲ್ಲಸಲ್ಲದ ನೆಪಮಾಡಿಕೊಂಡು ಸದ್ದಾಂ ಹುಸೇನನನ್ನು ಅಧಿಕಾರದಿಂದ ಒದ್ದೋಡಿಸಿ ಇರಾಕನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದೂ ನಿಜ - ಇಡೀ ಪ್ರಪಂಚವನ್ನೇ ತನ್ನ ಕೈನಲ್ಲಿಟ್ಟುಕೊಳ್ಳಲು ರೂಸ್ವೆಲ್ಟ್ ನೀತಿಗಳನ್ನು ಪಾಲಿಸುತ್ತಿರುವುದೂ ನಿಜ - ಇರಾಕ್‌ನಲ್ಲಿ ಯುರೇನಿಯಂ ಹಾಗೂ ಜೈವಿಕ ಶಸ್ತ್ರಾಸ್ತ್ರಗಳಿವೆ ಎಂಬ ಭ್ರಮೆ ಹುಟ್ಟಿಸಿದ್ದೂ ನಿಜ - ತನ್ನ ಜೊತೆ ಸೇರಿದರೆ ಇರಾಕ್‌ನಲ್ಲಿ ಮುಂದೆ ಸಿಗಬಹುದಾದ ಪೆಟ್ರೋಲಿಯಂ/ಲೋಹಗಳ ಗಣಿಗಳು ಸಿಗಬಹುದೆಂದು ಆಸೆ ತೋರಿಸಿ ಇಂಗ್ಲೆಂಡನ್ನು ಇರಾಕ್‌ನ ಮೇಲೆ ಎತ್ತಿಕಟ್ಟಿದ್ದೂ ನಿಜ - ಅಮೇರಿಕಾ ಯಾವಾಗಲೂ ದುರಾಸೆಯ ಪ್ರತೀಕ ಎನ್ನುವುದೂ ನಿಜ. ಆದರೆ ಸೆಪ್ಟೆಂಬರ್ 11, 2001ರಂದು ನಡೆದ ದುರಂತದಲ್ಲಿ ಮುಸ್ಲಿಂ ಭಯೋತ್ಪಾದಕರ ಕೈವಾಡವಿತ್ತೆನ್ನುವ ಕಾರಣಕ್ಕಾಗಿ ಬುಷ್, ಆಫ್‌ಘಾನಿಸ್ತಾನದ ಮೇಲೆ ಸೇಡು ತೀರಿಸಿಕೊಂಡಾಗ - ಕಾರ್ಪೆಟ್ ಬಾಂಬಿಂಗ್‌ನಿಂದಾಗಿ ''ಅಷ್ಟು'' ಜನ ಸತ್ತರು, ''ಇಷ್ಟೆಲ್ಲಾ'' ನಷ್ಟವಾಯಿತು ಎಂದು ದೂರಬಹುದು. ಆದರೆ ಇವತ್ತು ಆಫ್‌ಘಾನಿಸ್ತಾನದಲ್ಲಿ ಪ್ರಜೆಗಳ ಸರ್ಕಾರ





ಸ್ಥಾಪನೆಯಾಗಿದ್ದರೆ - ಹಮೀದ್ ಕರ್ಜಾಯ್ ಪುನಃ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೆ - ಆಫ್‌ಘನ್ ಜನರಿಗೆ ವೋಟ್ ಮಾಡುವ ಹಕ್ಕು ದೊರಕಿದ್ದರೆ - ಆಫ್‌ಘನ್ ಮಹಿಳೆಯರು ಸ್ವತಂತ್ರವಾಗಿ ಓಡಾಡುವಂತಾಗಿದ್ದರೆ - ವಾಕ್ ಸ್ವಾತಂತ್ರ್ಯ ದೊರಕಿದ್ದರೆ - ಹೊರ ಜಗತ್ತಿನೊಂದಿಗೆ ಸಂಪರ್ಕವಿಟ್ಟುಕೊಳ್ಳುವಂತಹ ಅವಕಾಶ ಇದ್ದರೆ - ಒಂಟಿಯಾಗಿ ಹೊರಗೆ ಹೋಗುವವರನ್ನು ಕೊಲ್ಲುವ ನೀಚರು ದೇಶ ಬಿಟ್ಟು ಓಡಿಹೋಗಿ ತಲೆ ಮರೆಸಿಕೊಳ್ಳುವ ಪರಿಸ್ಥಿತಿ ಬಂದಿದ್ದರೆ - ಗಡ್ಡ, ಮೀಸೆ ಇಲ್ಲದೆ ಓಡಾಡುವವರನ್ನು ಹಾಗೂ ಕ್ಷೌರ ಮಾಡಿಸಿಕೊಂಡವರನ್ನು ಅಟ್ಟಿಸಿಕೊಂಡುಹೋಗಿ ಕೊಲ್ಲುವವರು ಜೈಲುಗಳನ್ನು ಸೇರುವಂತಾಗಿದ್ದರೆ - ಹಿಂದೂಗಳು ಹಳದಿ ಪೇಟಾಗಳನ್ನು ಧರಿಸಬೇಕು ಎನ್ನುವ ಡ್ರೆಸ್‌ಕೋಡ್‌ಗೆ ನಿಷೇಧವನ್ನು ಹೇರಿದ್ದರೆ - ಪ್ರತಿಮೆಗಳನ್ನು ಒಡೆಯುವ ಕೆಲಸಗಳು ನಿಂತಿದ್ದರೆ - ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ನಿಂತಿದ್ದರೆ - ಕಾಶ್ಮೀರದಲ್ಲಿ ಭಯೋತ್ಪಾದಕರ ದಾಳಿ ಗಣನೀಯವಾಗಿ ಕಡಿಮೆಯಾಗಿದ್ದರೆ - ಇಸ್ಲಾಮಿಕ್ ಮೂಲಭೂತವಾದದ ಸುಳಿಯಿಂದ ಹೊರಬಂದಿದ್ದರೆ - ಉತ್ತರ ಕೊರಿಯಾದಲ್ಲಿ ಪ್ಲುಟೋನಿಯಂ-ಯುರೇನಿಯಂ ಶಸ್ತ್ರಾಸ್ತ್ರಗಳ ತಯಾರಿಕೆ ನಿಂತಿದ್ದರೆ - ಪಾಕಿಸ್ತಾನ ಅಣು ವಿಜ್ಞಾನಿ ಅಬ್ದುಲ್ ಖಾದಿರ್‌ಖಾನ್ ತನ್ನ ಅಣುತಂತ್ರಜ್ಞಾನವನ್ನು ವಿದೇಶಗಳಿಗೆ ಮಾರಾಟ ಮಾಡುವುದನ್ನು ನಿಲ್ಲಿಸಿದ್ದರೆ - ಇಂದು ಯಾವುದೇ ದೇಶವಾದರೂ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಭಯಪಡುತ್ತಿದ್ದರೆ - ವ್ಯಾಪಾರ ಹೊರಗುತ್ತಿಗೆಗೆ ಅವಕಾಶ ನೀಡಿದ್ದರೆ - ಭಾರತೀಯರಿಗೆ ಹೆಚ್-1 ವೀಸಾಗಳ ಸಂಖ್ಯೆಯನ್ನು 80000ಕ್ಕೆ ಏರಿಸಿದ್ದರೆ - ಭಾರತೀಯ ಸೈನ್ಯವನ್ನು ಇರಾಕ್‌ಗೆ ಕಳಿಸಲು ಒಪ್ಪದೇ ಇದ್ದಾಗಲೂ ಸಹ ಭಾರತಕ್ಕೆ ಸಹಾಯ ಸಿಗುತ್ತಿದ್ದರೆ - ಅದಕ್ಕೆ ಕಾರಣ ಈ ಬುಷ್. ಆದರೂ ಬುಷ್ ಅವಮಾನಕ್ಕೆ ಒಳಗಾಗುತ್ತಿದ್ದಾನೆ. ಇವನು ಅಧಿಕಾರಕ್ಕೆ ಬಂದಮೇಲೆ ಮೊದಲಬಾರಿಗೆ ಭಾರತ-ಅಮೇರಿಕಾ ನಡುವೆ ಜಾಯಿಂಟ್ ಮಿಲಿಟರಿ ಕವಾಯಿತು ನಡೆದಿದೆ. ಅಮೇರಿಕಾದ ಸೇನಾನಾಯಕರು, ಭಾರತೀಯ ಪೈಲಟ್‌ಗಳು ತಮ್ಮ ಪೈಲಟ್‌ಗಳಿಗಿಂತ ಶ್ರೇಷ್ಠ ಎಂದು ಸರ್ಟಿಫಿಕೇಟ್ ನೀಡಿದ್ದಾರೆ. ವ್ಯಾಪಾರ ಹೊರಗುತ್ತಿಗೆಯನ್ನು ವ್ಯಾಪಾರ ವಹಿವಾಟಿನ ಒಂದು ಭಾಗ ಎಂದು ತಿಳಿದಿರುವ ಬುಷ್, ಅದನ್ನೇನಾದರೂ ನಿಷೇಧಿಸಿಬಿಟ್ಟಿದ್ದರೆ ಇನ್‌ಫೋಸಿಸ್, ವಿಪ್ರೋ, ಟಿಸಿಎಸ್ ಕಂಪನಿಗಳು ಕ್ಷಣಮಾತ್ರದಲ್ಲಿ ಕುಸಿದು ಬೀಳುತ್ತಿದ್ದವು. ಸಾಫ್ಟ್‌ವೇರ್ ಪ್ರತಿಭಾವಂತರಿಗೆ ಕೆಲಸವೇ ಸಿಗುತ್ತಿರಲಿಲ್ಲ. ಅವನ ಮುಖ ಲಕ್ಷಣ ಚೆನ್ನಾಗಿಲ್ಲದೆ ಇರಬಹುದು ಆದರೆ ಮನುಷ್ಯತ್ವ ಸ್ವಲ್ಪವಾದರೂ ಇರುವ ಮನುಷ್ಯ!

<u>ರುಪಾಯಿ : ಈಗ ಸಿಪಾಯಿ !</u> (21, ಜನವರಿ 05; ಯುಎನ್‌ಐ) : ಡಾಲರ್ ಎದುರು ಈಗ ರುಪಾಯಿಯ ಬೆಲೆ ಏರುತ್ತಿದೆ. ವಿದೇಶಿ ಹೂಡಿಕೆ ನೆಪದಲ್ಲಿ ಪ್ರತಿ ತಿಂಗಳು

1000 ಕೋಟಿ ಡಾಲರ್ ಹಣ ಹರಿದುಬರುತ್ತಿದೆ. ಅಗ್ಗವಾಗಿ ಬಂದ ಡಾಲರ್ ಬಾಲ ಮುದುರಿಕೊಂಡು ಕುಳಿತಿದೆ. ರುಪಾಯಿಗೂ ಕಾಲದ ಬಂದಿದೆ. ಆದರೆ ರುಪಾಯಿಯ ಯಜಮಾನಿಕೆ ಎರಡಲಗಿನ ಚಾಕು ಇದ್ದಂತೆ. ಪೆಟ್ರೋಲಿಯಂ ಆಮದು ಮಾಡಿಕೊಳ್ಳುತ್ತಿರುವ ನಮಗೆ ರುಪಾಯಿಯ ಬಲ ಸ್ವಲ್ಪ ಏರಿದರೂ ಸಾವಿರಾರು ಕೋಟಿ ರುಪಾಯಿಗಳ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ. ಆದರೆ ಡಾಲರ್ ಅನ್ನೇ ನಂಬಿದ ಸಾಫ್ಟ್‌ವೇರ್ ಕಂಪನಿಗಳಿಗೆ ರುಪಾಯಿಯಿಂದ ಪ್ರಯೋಜನವಿಲ್ಲ. ಲಾಭಾಂಶಕ್ಕೆ 0.5% ಕತ್ತರಿ ಬೀಳುತ್ತದೆ. ಸಾವಿರಾರು ಕೋಟಿ ರುಪಾಯಿಗಳ ಲಾಭವಿರುವಂತೆಯೇ ಸಾವಿರಾರು ಕೋಟಿ ರುಪಾಯಿಗಳ ನಷ್ಟವೂ ಆಗುತ್ತಿದೆ. ನಾವು ಆರ್ಥಿಕವಾಗಿ ಬಲಿಷ್ಠರಾಗಿ ಉಳಿಯಬೇಕಾದರೆ ರುಪಾಯಿ ಬೆಲೆ ಏರುತ್ತಲೇ ಇರಬೇಕಾಗುತ್ತದೆ. ಇದು ಕೇಂದ್ರ ಸರ್ಕಾರದ ಜವಾಬ್ದಾರಿ.

- ಬಿ. ಎಸ್. ಸತೀಶ್


## ಮನು ಸತ್ಯ ಜಾತಕ ಕೇಂದ್ರ

ಪ್ರಿಯ ಸಂಕೇತಿ ಬಾಂಧವರೇ ಮತ್ತು ಪ್ರಿಯ ಸಂಕೇತಿ ರೈತ ಬಾಂಧವರೇ,

**ದಯವಿಟ್ಟು ಗಮನಿಸಿ !**

ಪ್ರಕೃತಿಯು ನಮಗೆ ಬೇಕಾದಷ್ಟು ಜೀವರಕ್ಷಕ ಔಷಧಗಳನ್ನು ಎಲ್ಲ ಆಹಾರಗಳಲ್ಲೂ ಹೊಟ್ಟಿನ ರೂಪದಲ್ಲಿ ಕೊಡುತ್ತಿದೆ. ಅದನ್ನು ಸಂಸ್ಕರಣೆ ಮಾಡದೆ ಸೇವಿಸಿ ಎಲ್ಲ ತರಹದ ರೋಗಗಳಿಂದ ಮುಕ್ತಿ ಪಡೆಯಿರಿ ಮತ್ತು ಆನಂದದಿಂದ ಜೀವನವನ್ನು ಮಾಡಿರಿ.

**ಅಕ್ಕಿಯಲ್ಲಿರುವ ಅತ್ಯಮೂಲ್ಯ ಹೊಟ್ಟನ್ನು ಬೇರ್ಪಡಿಸಬೇಡಿ**

ಹ. ಕೃ. ಸತ್ಯಪ್ರಕಾಶ್‌ರವರಿಂದ


## *Change of Address*


**R. S. Jagadish**
**No. 899, Chithrabhanu Road, Kuvempunagar,**
**Mysore - 570 023**
**Phone : 0821 - 251 2463**






## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

| | | |
|---|---|---|
| **ಡಾ॥ ಹೆಚ್.ಎನ್. ರವೀಶ್** | **ಬೆಂಗಳೂರು** | **ಪೋಷಕರು** |
| **ಆರ್. ವಿಶ್ವೇಶ್ವರಯ್ಯ** | **ಮೈಸೂರು** | **ಪೋಷಕರು** |
| **ಪುರೋಹಿತ್ ಆರ್. ಜಯರಾಂ** | **ಮೈಸೂರು** | **ಪೋಷಕರು** |

## ಡಾ|| ಧ್ರುವನಾರಾಯಣ್ ಇನ್ನಿಲ್ಲ

ಜನಿಸಿದ್ದು: 19.03.1921 ನಿಧನ ಹೊಂದಿದ್ದು: 09.02.2005



ಇವರ ತಂದೆ ಮೈಸೂರಿನಲ್ಲಿ ವಕೀಲರಾಗಿದ್ದ ಸಾಲಿಗ್ರಾಮ ಸುಬ್ಬರಾಯರು. ಇವರು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ L. M. P. ಪದವಿ ಪಡೆದರು. ಇವರು ಬೆಟ್ಟದಪುರ ಸಂಕೇತಿ ಸಂಘದ ಕಾರ್ಯದರ್ಶಿಯಾಗಿಯೂ, ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ ಹಾಗೂ ಕೊನೆಯವರಿಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು.

ಇವರು ಗಾಂಧೀಬಜಾರ್‌ನಲ್ಲಿ ಕಾಮಧೇನು ಕ್ಲಿನಿಕ್ ಎಂಬ ಹೆಸರಿನಲ್ಲಿ ಔಷಧಾಲಯವನ್ನು ತೆರೆದು, ನಂತರ ಬಸವನಗುಡಿ ಸಹಕಾರ ಸಂಘದ ಎದುರು ಸುಮಾರು ಐವತ್ತು ವರ್ಷದಿಂದ ಔಷಧಾಲಯವನ್ನು ನಡೆಸುತ್ತಾ ಬಂದಿದ್ದರು. ಈಗ್ಗೆ 6 ತಿಂಗಳಿನಿಂದ ಮನೆಯಲ್ಲಿಯೇ ಔಷಧಾಲಯವನ್ನು ತೆರೆದಿದ್ದರು.

ಸಂಗೀತದಲ್ಲಿ ತುಂಬಾ ಅಭಿರುಚಿಯಿದ್ದ ಇವರು ಬೆಂಗಳೂರು ಗಾಯನ ಸಮಾಜದ ಸಕ್ರಿಯ ಸದಸ್ಯರಾಗಿದ್ದರು; ಗಾಯನ ಸಮಾಜದ ಕಾರ್ಯದರ್ಶಿ, ಖಜಾಂಚಿ ಹಾಗೂ ಆಂತರಿಕ ಲೆಕ್ಕಪರಿಶೋಧಕರಾಗಿಯೂ ಕಾರ್ಯ ನಿರ್ವಹಿಸಿದರು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದೊಡ್ಡಬಳ್ಳಾಪುರದಲ್ಲಿ ಹಾಗೂ ಅಶಕ್ತ ಪೋಷಕ ಸಭಾದಲ್ಲಿ ಏರ್ಪಡಿಸಿದ್ದ ಉಚಿತ ವೈದ್ಯಕೀಯ ಶಿಬಿರದಲ್ಲಿ ಭಾಗವಹಿಸಿದ್ದರು. ಅಶಕ್ತ ಪೋಷಕ ಸಭಾದ ಸುವರ್ಣ ಮಹೋತ್ಸವದಲ್ಲಿ (1978ನೇ ಇಸವಿ) ಇವರನ್ನು ಗೌರವಿಸಲಾಯಿತು.

ಇವರು ಬಸವನಗುಡಿ ಸಹಕಾರ ಸಂಘ, ಬಸವನಗುಡಿ ತರಕಾರಿ ಸಹಕಾರಿ ಸಂಘದ ಸಕ್ರಿಯ ಸದಸ್ಯರಾಗಿದ್ದರು. ಇವರ ಗಾಂಧಿಬಜಾರಿನ ಔಷಧಾಲಯ ಜನಪ್ರಿಯವಾಗಿತ್ತು.

ಇವರ ಕುಟುಂಬದ ಹಲವಾರು ಸದಸ್ಯರು (ದಿ|| ಎಸ್. ರಾಜಾರಾಮರಾವ್, ದಿ|| ಎಸ್. ಮುಕುಂದರಾವ್, ದಿ|| ಎಸ್. ಕೆ. ನಾರಾಯಣರಾವ್, ಡಾ|| ಎಸ್. ಡಿ. ಸುಬ್ಬರಾವ್, ಹಾಗೂ ಸರಳಾ) ಸಂಕೇತಿ ಸಂಘಗಳ ಕಾರ್ಯಕಾರಿ ಸಮಿತಿಗಳಲ್ಲಿದ್ದರು. ಒಟ್ಟಿನಲ್ಲಿ ಕುಟುಂಬವೇ ಸಂಕೇತಿ ಸಂಘಕ್ಕೆ ಶ್ರಮಿಸಿದೆ. ★





# THE PLACE OF “NEED” IN OUR ACTIVITIES

(.......from last issue)

Let us see what are man’s basic needs. There are 3 basic needs- food, clothing and shelter- “Hotte, Batte and Mane” as they say in Kannada. Except for the very very poor people, much below the poverty line, others are more than comfortable as far as these basic needs are considered as well as possessing many modern appliances. But desires do not cease with possession of many of the appliances. Desires that demand fulfilment at any cost - are the ones that cause the problem. Fulfilment of one’s desires cause other desires to arise. Eating food when hungry is a physical necessity. But wanting to eat in expensive eating places, different varieties of rich food and that too, again and again is what causes the problem. Most of us eat more than what we need and most of us have more items of clothing than we need or may use.

Let us consider eating which we do three times a day, seven days a week, and talking which we do many times a day. Eating and talking are twin functions of the tongue, and very great discipline should be exercised in both these functions, preferably self imposed. We eat, not actually when hungry but at “meal times” arrived at by habit. We eat, at times, even overeat, what we like, even against medical advise, i.e., when there is no ‘need’ at all for such overeating or in fact when it is positively to be avoided. Many of us are slaves to our taste buds and fall to temptations easily, literally as per Oscar Wilde’s observation ‘The best way of resisting temptation is by yielding to it!”

Even more strict discipline is required in the matter of speech. Man is the only species with the gift of speech. Man does not generally exercise control over his speech. Sometimes it is instantaneous reaction to what he hears. He hardly thinks if his words are likely to hurt the listener. The injury done to the psyche of the listener is harder to heal than physical injury and takes longer, and this is often forgotten. We sometimes talk for the sake of talking little realising that we may inadvertently express a strong opinion in a controversial or sensitive matter hurting the listener and leading to a heated argument needlessly. We may win an argument but lose a friend in the bargain, and is it worth it? While indescretion at the dining table harms oneself only, carelessness in speech hurts others which is worse. Taste buds and power of speech are assets if under control but would cause havoc if not so.

In “Yaksha Prasna”, Yaksha asks Yudhisthira some questions. One of the questions is” By renouncing which thing does one become wealthy”, the answer given is “Desire”. To another question, “What is poison” the answer is “wants”. A third question, “What is the foremost happiness”, Yudhisthira answers :”contentment” How apt are the answers!

Contentment rises in us when we are aware of what we have and what we have been given by the Lord and are happy with it. But wants and desires are bom when we focus on what we don’t have. If we love and enjoy what we have, we need not look for what we do not have. If we have enjoyed a full and hearty meal, we feel fully satisfied and have complete “trupti”. At that moment, if we are offered the best of dishes, are we attracted? Natural vyragya develops, (may be only for a few hours). Is it not only at the dining table that a man says “Enough - no more please” and really means it? Contentment (and gratitude) is for what we have already. Wants and desires





are projections in the future. Is it wise to not take notice of what we have at present, which is a certainty and look for fruits in the future which may not be a certainty? Contentment is a state of being which appears to be within our reach and contentment gives peace and happiness while fulfilling all desires may not be within our reach. Who denies that happiness is man’s eternal quest?

We can therefore see that in our daily activities and body functions we are generally guided by our needs. Take for instance, the body’s need of sleep particularly when it is very much tired or troubled by some anxieties when it wants nothing else. Sound sleep refreshes the body as nothing else does. Lack of sleep tires the body greatly and makes it wish for more and more sleep. Anxiety for sleep pushes it away.. But when we are stimulated and attracted by “Window shopping” we are carried away by our desires and wants and justify to ourselves that they are necessities and indulge in needlessly and endlessly fulfilling them. We give very little care to the need of strict discipline particularly to the twin functions of tongue, eating & talking. Contentment is awareness of Bhagwan's gifts to us and must recognise it as His Kripa. May we pray for His Grace?

**Lt. Col. B.V.S. RAO (Retd.)**
Tel No: 2528 2899

## *Change of Address*

**Dr. R. N. Thyagarajan, Ramaa Thyagarajan**
**No. 172, F-2, W.O.C. Road, 2nd Stage, Opp. Naidu Hall,**
**12th Cross, Mahalakshmipuram, Bangalore - 560 082.**
**Ph : 23492135**

# ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜ ಆರಾಧನೆ

## ಬೆಂಗಳೂರು ಶಾಖೆಯ ವರದಿ

ನಮ್ಮ ನಾಡಿನ ಸಂಗೀತ ಪರಂಪರೆ ಸವಿ ನೆನಪನ್ನು ತಾ।। 30.01.05 ಭಾನುವಾರದಂದು ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜ ಆರಾಧನೆ ಮೂಲಕ ಸಂಕೇತಿ ಬಂಧುಗಳಿಗೆ ತಿಳಿಯಪಡಿಸಲಾಗಿತ್ತು. ಎರಡು ವರ್ಷ ತುಂಬಿದ ಈ ಆರಾಧನೆಯನ್ನು ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಬೆಂಗಳೂರು-82 ರಲ್ಲಿ ಬಹಳ ವಿಜೃಂಭಣೆಯಿಂದ ಸಂಘದ ವತಿಯಿಂದ ಆಚರಿಸಲಾಯ್ತು. ಸುಮಾರು 150 ಸಂಕೇತಿ ಬಂಧುಗಳು ಸೇರಿದ್ದರು.

ಕಾರ್ಯಕ್ರಮ ಬೆಳಿಗ್ಗೆ 10.30 ಘಂಟೆಗೆ ಪ್ರಾರಂಭವಾಯ್ತು. ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿಯನ್ನು ವಾಕ್ಚತುರೆ ಶ್ರೀಮತಿ ಆರ್.ಕೆ. ಗೀತಾಮಣಿಯವರು ಅತ್ಯಂತ ಆತ್ಮೀಯವಾಗಿ ನಡೆಸಿಕೊಟ್ಟರು.

ಶ್ರೀ ಎಸ್.ಸಿ. ಮಂಜುನಾಥ್ ಮತ್ತು ಅವರ ಕುಮಾರ ಚಿ।। ಪ್ರಮೋದ್‌ರವರಿಂದ ವೇದಘೋಷ ಮತ್ತು ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀ ಸುಂದರೇಶ್‌ರವರಿಂದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯ್ತು.

ಮುಖ್ಯ ಕಲಾವಿದರಾದ ಸಂಗೀತ ವಿದ್ವಾನ್ ಶ್ರೀ ಆರ್. ಕೆ. ಪ್ರಸನ್ನ ಕುಮಾರ್, ಶ್ರೀಮಾನ್ ಬಿ.ಎನ್.ವಿ. ಸುಬ್ರಹ್ಮಣ್ಯ, ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಶ್ರೀ ಎಂ. ನರಸಿಂಹನ್, ಅಧ್ಯಕ್ಷರು, ಬೆಟ್ಟದಪುರ ಸಂಕೇತಿ ಸಂಘ, ಶ್ರೀಮತಿ ಲೀಲಾ ಶ್ರೀಕಂಠಯ್ಯ, ಉಪಾಧ್ಯಕ್ಷರು, ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಮತ್ತು ಎಲ್ಲಾ ಕಲಾವಿದರನ್ನು, ಬಂಧುಗಳನ್ನು ಬೆಂಗಳೂರು ಶಾಖೆಯ ಅಧ್ಯಕ್ಷರಾದ ಶ್ರೀ ಆರ್. ಎಸ್. ಶ್ರೀನಿವಾಸಯ್ಯನವರು ಆತ್ಮೀಯವಾಗಿ ಸ್ವಾಗತಿಸಿದರು.

ಉದ್ಘಾಟನೆ ಸಮಾರಂಭ ಜ್ಯೋತಿ ಬೆಳಗಿಸುವುದರ ಮೂಲಕ ಪ್ರಾರಂಭವಾಗಿ ಶ್ರೀಮತಿ ಸಾವಿತ್ರಿ ವಿಶ್ವನಾಥ್‌ರವರಿಂದ ಶ್ರೀ ತ್ಯಾಗರಾಜ ಪುರಂದರ ದಾಸರ ಆತ್ಮಚರಿತ್ರೆ, ರಚಿಸಿರುವ ಕೃತಿಗಳು, ಕೀರ್ತನೆಗಳು ಅದರ ಔಚಿತ್ಯ ಎಲ್ಲವನ್ನು ವಿಸ್ತಾರವಾಗಿ ಎರಡು ತಿಳಿ ಮಾತನ್ನು ಹೇಳಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಅನಂತ ಕುಮಾರ್, ಸಂಸತ್ ಸದಸ್ಯ ಆಗಮಿಸಬೇಕಾಗಿತ್ತು. ಆದರೆ ಕಾರಣಾಂತರದಿಂದ ಅವರು ಬರಲಾಗಲಿಲ್ಲ. ಈ ಕಾರ್ಯ ಯಶಸ್ವಿಯಾಗಿ ನಡೆಯಲಿ ಎಂದು ಹರಸಿ 15,000/- ರೂ.ಗಳ ಕೊಡುಗೆಯನ್ನು ಕೊಡಲು ಆಶ್ವಾಸನೆ ನೀಡಿದ್ದಾರೆ. ಇದಕ್ಕೆ ಮುಖ್ಯ





ಸಂಚಾಲಕರಾಗಿ ಕಾರ್ಯ ನಿರ್ವಹಿಸಿದ ನಮ್ಮ ಶಾಖೆಯ ಸಮಿತಿಯ ಸದಸ್ಯರಾದ ಶ್ರೀ ಹೆಚ್.ವಿ. ಚಂದ್ರಶೇಖರ್ ಮುಖ್ಯ ಕರ್ತರು. ಇವರ ಸೇವೆಯು ಸಂಘಕ್ಕೆ ಅವಿಸ್ಮರಣೀಯ.

ಗೋಷ್ಠಿಗಾಯನ ಪಂಚರತ್ನ ಕೀರ್ತನೆಗಳನ್ನು ಸಂಗೀತ ವಿದ್ವಾನ್ ಆರ್.ಕೆ. ಪ್ರಸನ್ನ ಕುಮಾರ್‌ರವರ ನೇತೃತ್ವದಲ್ಲಿ ನಡೆಸಲಾಯ್ತು. ಇವರೊಂದಿಗೆ ಪಕ್ಕವಾದ್ಯ ನುಡಿಸಿದ ವೈಯಲಿನ್ ಶ್ರೀ ಎಂ.ಎಸ್.ಜಿ. ಉಮಾಶಂಕರ್ ಮೃದಂಗ ನುಡಿಸಿದ ಶ್ರೀ ಎನ್. ವಾಸುದೇವನ್, ಘಟಂ ನುಡಿಸಿದ ಶ್ರೀ ದಯಾನಂದ ಮೋಹಿತೆ ಮತ್ತು ಶ್ರೀ ಕಪಾಲೇಶ್ವರ್, ತಬಲ ನುಡಿಸಿದ ನಟರಾಜ ಎಲ್ಲರೂ ಅತ್ಯಂತ ಉತ್ಸುಕರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ಸಂಕೇತಿ ಬಂಧುಗಳಿಗೆ ತಮ್ಮ ಭಾಷಣದಲ್ಲಿ ಎರಡು ಹಿತವಚನವನ್ನು ತಿಳಿಯಪಡಿಸಿದರು.

(1) ಯುವಜನರು ಮುಂದೆ ಬಂದು ದಾಸರ ಪರಂಪರೆಯನ್ನು ಎಲ್ಲರ ಮನೆಯಲ್ಲಿ ಬೆಳಗಿಸಿ ಕೀರ್ತನೆಗಳನ್ನು ಹಾಡುವಂತೆ ಅಳವಡಿಸಿಕೊಳ್ಳಬೇಕು.

(2) ವೃದ್ಧಾಪ್ಯದಲ್ಲಿ ಮಾತಾ, ಪಿತೃಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸದೆ ಪ್ರತಿಯೊಬ್ಬ ಸಂಕೇತಿ ಯುವಜನರು ಆತ್ಮೀಯತೆ ತೋರಿ ಚೆನ್ನಾಗಿ ನೋಡಿಕೊಳ್ಳಬೇಕು ಮತ್ತು ಯಾವುದೇ ಕಾರಣಕ್ಕೂ ಅವರುಗಳನ್ನು ವೃದ್ಧಾಶ್ರಮಕ್ಕೆ ಸೇರಿಸಬಾರದು ಎಂದು ಹಿತವಚನವನ್ನು ಹೇಳಿದರು.

ನಂತರ ಅಧ್ಯಕ್ಷರಿಗೂ ಮತ್ತು ಎಲ್ಲಾ ಅತಿಥಿಗಳಿಗೂ ಫಲಪುಷ್ಪ ಅರ್ಪಿಸಿ ಮಾಲಾರ್ಪಣೆ ಮಾಡಲಾಯ್ತು.

ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಅತ್ಯಂತ ಪ್ರಮುಖ ಪಾತ್ರ ವಹಿಸಿದ ಶ್ರೀ ಎಸ್. ಸಿ. ಮಂಜುನಾಥ್‌ರವರಿಗೂ, ಶಾಖೆಯ ಎಲ್ಲಾ ಸದಸ್ಯರಿಗೂ ವಿಶೇಷವಾಗಿ ಕೇಂದ್ರಸಮಿತಿ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್‌ರವರಿಗೂ ಹೃತ್ಪೂರ್ವಕವಾದ ಅನಂತ ವಂದನೆಗಳು.

ಕಾರ್ಯಕ್ರಮದ ಮುಕ್ತಾಯದಲ್ಲಿ ಕಾರ್ಯದರ್ಶಿಯವರಾದ ಶ್ರೀ ಬಿ. ಆರ್. ನರಸಿಂಹಮೂರ್ತಿಯವರಿಂದ ವಂದನಾರ್ಪಣೆಯಾಯ್ತು.

ಮಹಾ ಮಂಗಳಾರತಿನಂತರ ಸಂಕೇತಿ ಬಂಧುಗಳೆಲ್ಲಾ ರುಚಿರುಚಿಯಾದ ಪ್ರಸಾದ ಭೋಜನ ಸ್ವೀಕರಿಸಿ ತೆರಳಿದರು.

**- ಶ್ರೀ ಬಿ. ಆರ್. ನರಸಿಂಹ ಮೂರ್ತಿ**, ಗೌ।। ಕಾರ್ಯದರ್ಶಿ

# ಕಾಶೀಯಾತ್ರೆ - ಮತ್ತೂರು ಕೃಷ್ಣಮೂರ್ತಿಗಳೊಂದಿಗೆ

...... ಕಳೆದ ಸಂಚಿಕೆಯಿಂದ

ಇನ್ನು ಬುದ್ಧನ ಶಾಸನವನ್ನು ನೋಡೋಣ. ಯಾವ ಪಾಪವನ್ನು ಮಾಡದೆ, ಯಾವಾಗಲೂ ಪುಣ್ಯವನ್ನು ಸಂಪಾದಿಸುವುದು. ಸದಾ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವುದು. ಅಂದು ವೈಶಾಖ ಶುದ್ಧ ಪೂರ್ಣಿಮೆ. ರಾತ್ರಿಯ ಮೂರು ಜಾವಗಳು ಕಳೆದಿದ್ದವು. ಬುದ್ಧನು 45 ವರ್ಷಗಳ ದೀರ್ಘ ಪರ್ಯಟನದಿಂದ ಬಳಲಿ, ತನ್ನ 80ನೇ ಇಳಿ ವಯಸ್ಸಿನಲ್ಲಿ ಹಿಮಾಲಯದ ತಪ್ಪಲಿನ ಕುಶೀ ನಗರದ ಅನತಿ ದೂರದಲ್ಲಿರುವ ಪ್ರಶಾಂತವಾದ ಗುಡ್ಡವೊಂದರ ಮೇಲೆ ವಿಶ್ರಾಂತಿ ಬಯಸಿದಾಗ ತನಗೆ ತನ್ನ ಪರಿ ನಿರ್ವಾಣದ ಹಂತ ಸಮೀಪವಾಗಿದೆ ಎಂದು ತಿಳಿಯಿತು. ಪ್ರಮುಖ ಶಿಷ್ಯ ಆನಂದನಿಗೆ ಈ ವಿಷಯ ಅರುಹಿದಾಗ ಆತ ದುಃಖಿತನಾಗುತ್ತಾನೆ. ಆಗ ಬುದ್ಧನು ''ಆನಂದ ಎದೆಗುಂದದಿರು ಮನುಷ್ಯನು ತಾನು ಪ್ರೀತಿಸುವ ಎಲ್ಲಾ ವಸ್ತುಗಳಿಂದಲೂ ಒಂದು ದಿನ ದೂರವಾಗಲೇ ಬೇಕು. ಈ ಜಗತ್ತಿನ ಎಲ್ಲಾ ವಸ್ತುಗಳೂ ನಶ್ವರವಾದವುಗಳೇ! ನನ್ನ ಉಪದೇಶಗಳನ್ನು ಅನುಸರಿಸಿ ಜನರಿಗೆ ಹಿತವಾಗಿ ಬೋಧಿಸಿ, ಮುಕ್ತಿ ಸಾಧನೆಗಾಗಿ ತೀವ್ರ ಸಾಧನೆಯನ್ನು ಮಾಡಿರಿ. ಕಾಲವೂ ಸರಿದು ಹೋಗುತ್ತಿದೆ. ಎಚ್ಚರಿಕೆಯಿಂದ ಪುಣ್ಯವನ್ನು ಸಂಪಾದಿಸಿಕೊಳ್ಳಿ'' ಎಂದು ನುಡಿದು, ನಿಧಾನವಾಗಿ ಶಿಷ್ಯರಿಗೆ ''ಲಜ್ಜೆ ಎಂಬುದು ಬೇಕು. ಲಜ್ಜೆಹೀನವೆಂದರೂ ಒಂದೇ, ಗುಣಹೀನವೆಂದರೂ ಒಂದೇ ಎಷ್ಟು ನಿರ್ಲಜ್ಜರಾಗಿರುವರೋ ಅಷ್ಟು ವಿವೇಕ ಶೂನ್ಯರು. ಭೂಮಿಯ ಮೇಲೆ ಏನೆಲ್ಲಾ ಬೆಳೆಯುತ್ತದೆಯೋ ಅದನ್ನು ಕಡಿಯಬೇಡಿ, ಭೂಮಿಯನ್ನು ದೊಗರುಗೊಳಿಸದಿರಿ, ಕೀಳದಿರಿ'' ಇಷ್ಟು ಹೇಳಿ, ಅನಂತರ ಆಧ್ಯಾತ್ಮ ಯೋಗದಲ್ಲಿ ಚಿರ ವಿಶ್ರಾಂತಿಯನ್ನು ಹೊಂದಿದನು. ಬುದ್ಧನು ಆಡಿದ ಕೊನೆಯ ಮಾತುಗಳು ಮಾನವ ಕುಲಕ್ಕೆ ಅನ್ವಯಿಸುವ ಸರ್ವಕಾಲಿಕ ಸತ್ಯಗಳು. ಈ ದಿನದಂದೇ ಗೌತಮ, ರಾಜಕುಮಾರ ಸಿದ್ಧಾರ್ಥ ಜನಿಸಿದ್ದು. ಅವನು ಬುದ್ಧನಾದದ್ದು ಈ ದಿನದಂದೇ. ಕೊನೆಗೆ ಮಹಾ ಪರಿನಿರ್ವಾಣ ಪಡೆದದ್ದು ಸಹ ಈ ದಿನವೇ. ಕ್ರಿ.ಪೂ. 543ರ ವೈಶಾಖ ಶುದ್ಧ ಪೂರ್ಣಿಮೆಯ ದಿನ ಜನನ. ಕ್ರಿ.ಪೂ. 623ರ ವೈಶಾಖ ಶುದ್ಧ ಪೂರ್ಣಿಮೆಯ ದಿನ ದೇಹ ತ್ಯಾಗವನ್ನು ಇದೇ ದಿನ ಮಾಡಿದ್ದು. ದುಃಖ ನಿವಾರಣೆಗೆ ಬುದ್ಧನ ಅಷ್ಟಾಂಗ ಮಾರ್ಗ ಮಹತ್ವದ್ದಾಗಿದೆ.

ಬೌದ್ಧ ಧರ್ಮದವರಿಗೆ ಈ ವೃಕ್ಷ ''ಬೋಧಿ ವೃಕ್ಷ'' ಎಂದು ಪವಿತ್ರವಾಗಿದೆ.





ಗೌತಮಬುದ್ಧನು ತನ್ನ ಧ್ಯಾನಕ್ಕಾಗಿ ಅರಳೀ ಮರವನ್ನು ಆರಿಸಿಕೊಂಡಿದ್ದಾನೆಂದು ಹೇಳಲಾಗಿದೆ. ಅಶ್ವಘೋಷನ ಬುದ್ಧಚರಿತೆಯೇ ಇದಕ್ಕೆ ಆಧಾರವಾಗಿ ನಿಂತಿದೆ. ಅಶ್ವತ್ಥ ವೃಕ್ಷದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ನೆಲೆ ನಿಂತಿರುತ್ತಾರೆ. ಅದರ ಬುಡದಲ್ಲಿ ಎಲ್ಲಾ ವೇದಗಳು ನೆಲೆಯಾಗಿರುತ್ತವೆ ಎಂಬ ನಂಬಿಕೆಯು ನಮ್ಮಲಿದೆ. ಈ ವೃಕ್ಷಕ್ಕೆ ಮಂಗಳವಾರ ದಿನವೇ ಪೂಜೆ ಸಲ್ಲಿಸಿದರೆ ಶ್ರೇಯಸ್ಕರ ಎಂದು ಹೇಳಲಾಗಿದೆ. ಭಾರತೀಯರ ಧಾರ್ಮಿಕ ಜೀವನದಲ್ಲಿ ಈ ವೃಕ್ಷವು ವಿಶೇಷವಾದ ಸ್ಥಾನವನ್ನು ಬಹಳ ಹಿಂದಿನಿಂದಲೂ ಪಡೆದುಕೊಂಡು ಬಂದಿರುವುದು ಸತ್ಯಸಂಗತಿಯಾಗಿದೆ ನೋಡಿದಿರಾ ಅಶ್ವತ್ಥ ವೃಕ್ಷದ ಮಹಿಮೆಯನ್ನು !

ನಾವು ಜನಜಂಗುಳಿಯ ಮಧ್ಯೆ ನುಗ್ಗಿಕೊಂಡು ಬೋಧಿ ವೃಕ್ಷದ ಸಮೀಪ ಬಂದೆವು. ಒಂದು ಕ್ಷಣ ನಿಂತು ನೋಡುವಾಗ ಇದು ಕನಸೋ ನನಸೋ ಹೇಳಲಿಕ್ಕೆ ಆಗುತ್ತಿರಲಿಲ್ಲ. ಆ ಪ್ರಶಾಂತ ವಾತಾವರಣದ ಸುತ್ತಲೂ ಸಹಸ್ರ ಸಂಖ್ಯೆ ಮೇಣದ ಬತ್ತಿಗಳನ್ನು ಟಿಬೆಟ್ಟಿಯನ್ನರು ಹಚ್ಚಿ ಪ್ರಾರ್ಥನೆ ಮಾಡುತ್ತಿದ್ದರು. ಗೌತಮಬುದ್ಧನಿಗೆ ಜ್ಞಾನೋದಯವಾದ ಬೋಧಿ ವೃಕ್ಷದ ಕೆಳಗೆ ನಾವು, ಪರೋಕ್ಷದಲ್ಲಿ ನೀವೂ ಕೂತುಕೊಂಡಾಗ ಆಗುವ ಅನುಭವವನ್ನು ಒಂದು ಕ್ಷಣ ಯೋಚಿಸಿದರೆ, ಪ್ರತಿಯೊಬ್ಬರಿಗೂ ಆಗುವ ರೋಮಾಂಚನ ವರ್ಣಿಸಲು ಅಸಾಧ್ಯ. ಹೆಚ್ಚು ಸಮಯ ಕೂತುಕೊಳ್ಳಬೇಕೆಂಬ ಆಸೆ. ಆದರೆ ನಾವು ಹೋದ ಸಂದರ್ಭದಲ್ಲಿ ಲಕ್ಷಾಂತರ ಜನ ಸಾಲುಗಟ್ಟಿ ಬರುತ್ತಿರುವಾಗ, ಅವರಿಗೂ ನಮ್ಮ ಹಾಗೇ ಕ್ಷಣ ಕಾಲ ಮರದ ಸಾಮೀಪ್ಯ ಇರಬೇಕೆಂಬುದು ಸಹಜವಲ್ಲವೇ. ಮತ್ತೊಮ್ಮೆ, ಮಗದೊಮ್ಮೆ ವೃಕ್ಷವನ್ನು ಕಣ್ಣೆಗೊತ್ತಿಕೊಂಡು, ಬುದ್ಧದೇವನನ್ನು ನೆನಸಿಕೊಂಡು ಅತಿ ಪ್ರಯಾಸದಿಂದ ಸ್ಥಳವನ್ನು ಬೇರೆಯವರಿಗೆ ಬಿಟ್ಟುಕೊಟ್ಟು ಮುಂದಕ್ಕೆ ಹೋದೆವು. ಈ ಮಹಾನ್ ವೃಕ್ಷಕ್ಕೆ ಬಿಳಿ ಬಣ್ಣದ ಟೇಪುಗಳನ್ನು ಕಟ್ಟಿದ್ದನ್ನು ನೋಡಿದರೆ, ಭಕ್ತಾದಿಗಳು ತಮ್ಮ ಹರಕೆಯನ್ನು ತೀರಿಸಲು ಈ ರೀತಿ ಕಟ್ಟಿರಬಹುದೆಂದು ಊಹಿಸಬಹುದು. ವಾರಣಾಸಿಯಿಂದ 10 ಕಿ.ಮೀ. ದೂರದಲ್ಲಿ ತನ್ನ 5 ಶಿಷ್ಯರಿಗೆ ಪ್ರಥಮ ಧರ್ಮೋಪದೇಶ ಮಾಡಿದ ಬೌದ್ಧ ಧರ್ಮದ ತೊಟ್ಟಿಲಿದೆ ಎಂದು ಹೇಳಲಾಗಿದೆ. ಇಲ್ಲಿ ಬುದ್ಧನು ನಿರ್ವಾಣವನ್ನು ಪಡೆಯಲು ಒಂದು ಮಧ್ಯ ದಾರಿಯನ್ನು ತಿಳಿಸಿದನು. ಈ ಸ್ಥಳದ ಮಹತ್ವವನ್ನು ಅರಿತು ಕ್ರಿ.ಪೂ. 3ನೇ ಶತಮಾನದಲ್ಲಿ ಅಶೋಕ ಚಕ್ರವರ್ತಿಯು ಕೆಲವು ಉತ್ಕೃಷ್ಟಕೀರ್ತಿ ಸ್ತಂಭಗಳನ್ನು ಮತ್ತು ದತ್ತಿ ದಾನಗಳನ್ನು ಬಿಟ್ಟಿದ್ದಾನೆ. 34 ಮೀಟರ್ ಎತ್ತರದ ''ಡಾಮೆಕ್'' ಸ್ತೂಪವೊಂದಿದೆ. ಇದು ಅಸಾಮಾನ್ಯ ಕಟ್ಟಡ. ಇದು ಗೌತಮಬುದ್ಧನ ಪಾರ್ಥಿವ ಅವಶೇಷಗಳನ್ನು

ಹೊಂದಿದೆ. ಬುದ್ಧನ ಅನುಚರರುಗಳು ಈ ಪ್ರದೇಶದಲ್ಲಿ ಶತಮಾನಗಳಿಂದ ಪೂಜೆ ಸಲ್ಲಿಸಿ ಈ ಸ್ಥಳಕ್ಕೆ ಮೆರುಗನ್ನು ಕಲ್ಪಿಸಿದ್ದಾರೆ. ಚೌಕಂಡಿ ಸ್ತೂಪವನ್ನು ಕ್ರಿ.ಶ. 1555ರಲ್ಲಿ ಮೊಗಲ್ ಚಕ್ರವರ್ತಿ ಅಕ್ಬರ್ ಕಟ್ಟಿಸಿದ್ದಾನೆ. ಈ ಸ್ಥಳವು ಬುದ್ಧನ 5 ಶಿಷ್ಯರು ಸಂಧಿಸಿದ ಸ್ಥಳವಾಗಿದೆ. ಅಶೋಕ ಚಕ್ರವರ್ತಿ ಸಾರನಾಥಕ್ಕೆ ಭೇಟಿಕೊಟ್ಟ ಜ್ಞಾಪಕಕ್ಕೋಸ್ಕರ ಅಶೋಕನ ಸ್ತಂಭವನ್ನು ಕಟ್ಟಿಸಿದ್ದಾರೆ. ಪ್ರಥಮತಃ 4 ಸಿಂಹಗಳಿಂದ ಅಲಂಕರಿಸಲ್ಪಟ್ಟ ಸ್ತಂಭ ಸಾರನಾಥ ವಸ್ತುಸಂಗ್ರಹಾಲಯದಲ್ಲಿದೆ. ಇದು ಭಾರತದ ಲಾಂಛನವೂ ಆಗಿದೆ. ಧರ್ಮದ ಚಕ್ರ ತಿರುಗುತ್ತಿರುವುದು ಪುರಾತನ ವಸ್ತುಸಂಗ್ರಹಾಲಯದಲ್ಲಿದೆ. ಮೂಲ ಗಂಧ ಕುಟಿ ವಿಹಾರ, 1930ರಲ್ಲಿ ಟಿಬೆಟ್ಟಿಯನ್ನರು ದೇವಾಲಯವನ್ನು ಕಟ್ಟಿಸಿದರು. ಜಪಾನಿನ ಕಲಾಕಾರ ಕೋಸೆಟ್ಸುನೋಸೋ ಬಂಗಾರದ ಬುದ್ಧನ ಪ್ರತಿಮೆಯನ್ನು ಮಾಡಿದ್ದಾನೆ. ಆವರಣದಲ್ಲಿರುವುದೇ ಬೋಧಿವೃಕ್ಷ, ಬುದ್ಧನು ಜ್ಞಾನೋದಯಗೊಂಡ ಬೋಧಿವೃಕ್ಷದ ಸಂತತಿ ಎಂದು ನಂಬಲಾಗಿದೆ.

(ಮುಂದುವರಿಯುವುದು)

**ಆರ್. ಎಸ್. ಕಾಶೀಪತಿ**
ಕುಶಾಲನಗರ

## ಬೆಂಗಳೂರು ಶಾಖೆ

ಶಾಖೆಯ ಚಟುವಟಿಕೆಗಳನ್ನು ವಿಸ್ತರಿಸುವ ಸಲುವಾಗಿ ತಾ|| 06.02.05ರಂದು ಭಾನುವಾರ, ಮಲ್ಲೇಶ್ವರಂನಲ್ಲಿ ಒಂದು ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಅದರ ನಡವಳಿಕೆಯಂತೆ ಮಲ್ಲೇಶ್ವರ, ರಾಜಾಜಿನಗರ, ಸುಬ್ರಹ್ಮಣ್ಯನಗರ, ಮತ್ತೀಕೆರೆ, ಯಲಹಂಕ ಇವುಗಳನ್ನೊಳಗೊಂಡಂತೆ ಬೆಂಗಳೂರು ಉತ್ತರ ಉಪ ಶಾಖೆಯನ್ನು ಪ್ರಾರಂಭಿಸಬೇಕೆಂದು ತೀರ್ಮಾನಿಸಲಾಯಿತು. ಇದಕ್ಕೆ ಒಂದು ಪುಟ್ಟ ಸಮಿತಿ ರಚಿಸಿ ಶ್ರೀ ಬಿ. ಎಸ್. ವೆಂಕಟರಾಮಯ್ಯ ಅಧ್ಯಕ್ಷರಾಗಿ, ಶ್ರೀ ಎಸ್. ವಿ. ಕೃಷ್ಣಮೂರ್ತಿ ಕಾರ್ಯದರ್ಶಿಯಾಗಿ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸುವರೆಂದು, ಇದರ ಸಲುವಾಗಿ ಈ ಮೇಲ್ಕಂಡ ಬಡಾವಣೆಗಳಲ್ಲಿ ಸಂಕೇತಿ ಬಂಧುಗಳನ್ನು ಭೇಟಿ ಮಾಡುವರು. ಸಂಕೇತಿ ಬಾಂಧವರು ಸಹಕರಿಸಬೇಕಾಗಿ ಕೋರುತ್ತೇವೆ. ಇದೇ ರೀತಿ ಉಳಿದ ಬಡಾವಣೆಗಳಲ್ಲೂ ಕೂಡ ಸಮಿತಿ ರಚಿಸುವ ಯೋಜನೆ ಇದೆ.

ಬನ್ನಿ, ಸಂಘವನ್ನು ಬಲಪಡಿಸೋಣ.

ಅಧ್ಯಕ್ಷರು
ಹಾಗೂ ಕಾರ್ಯಕಾರಿ ಸದಸ್ಯರು





## ಬೆಂಗಳೂರು ಸಂಕೇತಿ ಮಹಿಳಾ ಸಮಾಜ

ದಿನಾಂಕ 22.01.05ರಂದು ಬೆಳಿಗ್ಗೆ 11.30ಕ್ಕೆ ಸದಸ್ಯೆಯರಿಗೆ **ಹಣ್ಣುಗಳಿಂದ ಮಾಡಿದ ಸಿಹಿ ಮತ್ತು ಅವಲಕ್ಕಿಯಿಂದ ಮಾಡಿದ ಖಾರ** ತಿಂಡಿಗಳ ಸ್ಪರ್ಧೆ ಮತ್ತು **Nestle** ಕಂಪನಿಯವರಿಂದ **Traffic Lights (Chacolates) Noodles**ನಿಂದ ಚುರುಮುರಿ ಮತ್ತು ಮಸಾಲೆವಡೆಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಆದರ್ಶ ವನಿತಾ ಸಮಾಜದಲ್ಲಿ ಆಯೋಜಿಸಲಾಗಿತ್ತು. ಅಂದಿನ ಆತಿಥ್ಯ ನೀಡಿದವರುಗಳು ಶ್ರೀಮತಿಯರಾದ ಮೈಥಿಲಿ, ಶೋಭಾ, ರಮಾ, ಸುಧಾ ಮತ್ತು ಗಿರಿಜಾ ಅವರುಗಳು.

**ಸ್ಪರ್ಧೆಯಲ್ಲಿ ಗೆದ್ದವರ ವಿವರ ಹೀಗಿದೆ :**

| | ಸಿಹಿ | ಖಾರ |
|---|---|---|
| I Prize | ಸರಸ್ವತಿ ಅ. ಸು. | ಶೋಭಾ ಪೃಥ್ವೀರಾಜ್ |
| II Prize | ಜಯಲತಾ | ಮಾಲತಿ ಕೇ. ನಾ. |
| III Prize | ನಳಿನಿ ನಟರಾಜ್ | ವೀಣಾ ಕಪಾಲೇಶ್ವರ್ |
| I Con. Prize | ಯಶೋದಮ್ಮ | ನಳಿನಿ ನಟರಾಜ್ |
| II Con. Prize | ಲೀಲ ಶ್ರೀಕಂಠಯ್ಯ | ಜಯಲತಾ |
| III Con. Prize | ಸರಸ್ವತಿ ಗೋಪಾಲ್ | ಸಾವಿತ್ರಿ ಅಶೋಕ್ |

ವಿಜೇತರಿಗೆ ಅಭಿನಂದನೆಗಳು.

**ರು. ಕೃ. ಗೀತಾಮಣಿ**
ಗೌ|| ಕಾರ್ಯದರ್ಶಿ, ದೂ. : 26695657

## ನೂತನ ವಿಳಾಸ ಪುಸ್ತಕ ಉಪಲಬ್ಧ

ಈ ಹಿಂದೆಯೇ ತಿಳಿಸಿದಂತೆ ನೂತನ ವಿಳಾಸ ಪುಸ್ತಕ, ಜನವರಿಯಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಬಿಡುಗಡೆಯಿಂದ ಈ ವಿಳಾಸ ಪುಸ್ತಕಗಳು ಮೈಸೂರಿನ ನಮ್ಮ ಕಛೇರಿಯಲ್ಲಿ ಹಾಗೂ ಬೆಂಗಳೂರಿನ ಕಛೇರಿಯಲ್ಲಿ ಉಪಲಬ್ಧ. ಈ ಹೊಸ ವಿಳಾಸ ಪುಸ್ತಕದ ಉಪಯೋಗ ಪಡೆಯಬೇಕಾಗಿ ವಿನಂತಿ.

**ಇದರ ಬೆಲೆ ಕೇವಲ ರೂ. 50.00**

**ಅಂಚೆ ಮೂಲಕ ಕೂಡ ಲಭ್ಯ.**

## ಮೈಸೂರಿನಲ್ಲಿ ತಾ|| 23.01.2005ರಂದು ನಡೆದ ಸಂಘದ 58ನೆಯ ವಾರ್ಷಿಕ ಸರ್ವಸದಸ್ಯರ ಸಭೆಯ ಸಂಕ್ಷಿಪ್ತ ವರದಿ

ಸಂಘದ ಕೇಂದ್ರ ಸಮಿತಿಯು ಇತ್ತೀಚಿನ ವರ್ಷಗಳಲ್ಲಿ ತಪ್ಪದೇ ಪಾಲಿಸಿಕೊಂಡು ಬಂದಿರುವ ಪದ್ಧತಿಯಂತೆ ಈ ಸಲದ ಸರ್ವಸದಸ್ಯರ ಸಭೆಯು ಮೈಸೂರಿನ ಸಂಘದ ಕಲ್ಯಾಣಮಂಟಪದ ಸಭಾಂಗಣದಲ್ಲಿ ತಾ|| 23.01.2005ರ ಭಾನುವಾರದಂದು ಬೆಳಿಗ್ಗೆ 10.30ಕ್ಕೆ ಆರಂಭವಾಯಿತು. ಕೇಂದ್ರ ಸಮಿತಿಯ ಖಜಾಂಚಿಯಾಗಿರುವ ಶ್ರೀ ಬಿ. ಎಸ್. ಜಗನ್ನಾಥ ಅವರಿಂದ ವೇದಘೋಷವಾದ ಮೇಲೆ ಕು|| ಸಿಂಧು ಸುಶ್ರಾವ್ಯವಾಗಿ ಪ್ರಾರ್ಥನಾ ಗೀತೆಯನ್ನು ಹಾಡಿದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಆರ್. ವಿ. ವಸಂತಲಕ್ಷ್ಮಿ ಸ್ವಾಗತ ಬಯಸಿದರು. ನಂತರ ಕಳೆದ ಅವಧಿಯಲ್ಲಿ ನಮ್ಮ ಬಾಂಧವರನ್ನೊಳಗೊಂಡಂತೆ ಅಗಲಿದ ಹಿರಿಯರು ಹಾಗೂ 'ಸುನಾಮಿ' ದುರಂತದಲ್ಲಿ ಮೃತರಾದವರ ನೆನಪಿಗಾಗಿ ಸಭೆ ಮೌನವನ್ನು ಆಚರಿಸಿತು. ಸಭೆಯ ಸೂಚನಾ ಪ್ರಕಟಣೆಯನ್ನು ಶ್ರೀಯುತರಾದ ಆದಿಶೇಷ ಮತ್ತು ಶಂಕರ ಅವರು ಓದಿದ ಮೇಲೆ ಸಂಘದ ಕಾರ್ಯದರ್ಶಿಗಳಾದ ಶ್ರೀ ಭಾಸ್ಕರ ಅವಧಾನಿಯವರು ಕಾರ್ಯದರ್ಶಿ ವರದಿಯನ್ನು ಓದಿದರು. ವರದಿಯಲ್ಲಿ ಪ್ರಕಟವಾಗದಿದ್ದ ಕೆಲವು ಅಂಶಗಳನ್ನು ಪ್ರಸ್ತಾಪಿಸುತ್ತಾ ಕಾರ್ಯದರ್ಶಿಗಳು ಕಲ್ಯಾಣಮಂಟಪದಲ್ಲಿ ಹೊಸದಾಗಿ ಅಳವಡಿಸಿರುವ ವಾಷ್ ಬೇಸಿನ್ ಹಾಗೂ ಆವರಣದಲ್ಲಿ ಇದ್ದ ಕಶ್ಮಲದ ನಿರ್ಮೂಲನವಾಗಿ ಸ್ವಚ್ಛತೆ - ಮಾಡಿರುವ ಬಗ್ಗೆ ಮಾಹಿತಿ ನೀಡಿದರು. ಕಲ್ಯಾಣಮಂಟಪದ ಹೊರಗಡೆ ವ್ಯವಸ್ಥೆ ಮಾಡಿರುವ ವಿದ್ಯುತ್ ನಾಮಫಲಕದ ಬಗ್ಗೆಯೂ ಪ್ರಸ್ತಾಪಿಸಿ ಈ ಎಲ್ಲ ಕೆಲಸಗಳೂ ಸಂಘದ ಜಂಟೀ ಕಾರ್ಯದರ್ಶಿ ಡಾ|| ಸುರೇಶ್ ಅವರ ದಕ್ಷ ನೇತೃತ್ವದಲ್ಲಿ ನಡೆದಿವೆ ಎಂದರು. ಶ್ರೀ ಶಂಕರ್ ಅವರು ಅವರ ಗೋತ್ರದವರ (ಕೌಂಡಿನ್ಯ) ಗಣಕೀಕೃತ ವಂಶವೃಕ್ಷವನ್ನು ಈ ಸಭೆಯಲ್ಲಿ ಪ್ರದರ್ಶಿಸಲಾಗಿದೆ ಹಾಗೂ ಉಳಿದ ಕುಟುಂಬದವರೂ ಈ ರೀತಿ ಮಾಡುವುದಾದರೆ ಸಂಘದ ಬರುವ ವಜ್ರಮಹೋತ್ಸವ ಹಾಗೂ ವಿಶ್ವ ಸಂಕೇತಿ ಸಮ್ಮೇಳನಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆ ಮಾಡಲಾಗುವುದು ಎಂದರು. ಅಂತೆಯೇ ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವೃದ್ಧಾಶ್ರಮದ ನಕ್ಷೆಯನ್ನೂ ಈ ಸಭೆಯಲ್ಲಿಯೇ ಪ್ರದರ್ಶಿಸಲಾಗಿದ್ದು ಪ್ರಾರಂಭದಲ್ಲಿ 10 ಬಾಂಧವರಿಗೆ ವೃದ್ಧಾಶ್ರಮದಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದರು.

ಸಂಘದ ಖಜಾಂಚಿಗಳಾದ ಶ್ರೀ ಬಿ. ಎಸ್. ಜಗನ್ನಾಥ ಅವರು ಲೆಕ್ಕ ಪತ್ರವನ್ನು ಅನುಮೋದನೆಗೆ ಮಂಡಿಸಿದರು. ಇದಾದ ನಂತರ ಚರ್ಚೆಗೆ ಅನುವು





ಮಾಡಿಕೊಡಲಾಯಿತು.

2003-04ರ ವಾರ್ಷಿಕ ಲೆಕ್ಕ ಪತ್ರಗಳನ್ನು ಪ್ರತಿ ಸದಸ್ಯರಿಗೂ ಅಂಚೆ ಅಥವಾ ಕೊರಿಯರ್ ಮೂಲಕ ತಲುಪಿಸಬೇಕೆಂದು ಶ್ರೀಯುತರಾದ ಹೆಚ್. ಎಸ್. ಜಗನ್ನಾಥ ಮತ್ತು ಬಿ. ಎಸ್. ರಾಮಚಂದ್ರ ಆಗ್ರಹಪಡಿಸಿದರು. ಉತ್ತರಿಸಿದ ಅಧ್ಯಕ್ಷರು ಸದಸ್ಯರೆಲ್ಲರೂ ಸಂಘದ ಮೇಲಿಟ್ಟಿರುವ ವಿಶ್ವಾಸವೇ ಮುಖ್ಯ ಎಂದರಲ್ಲದೆ, ಅಂಚೆ ಹಣ ವಿಪರೀತವಾಗಿ ಹೆಚ್ಚಾಗುತ್ತಿದ್ದ ಕಾರಣ ಪ್ರತಿಯೊಬ್ಬರಿಗೂ ಕಳುಹಿಸಲು ಸಾಧ್ಯವಾಗಲಿಲ್ಲ ಎಂದು ನುಡಿದು ಈಗಲೂ ಸದಸ್ಯರು ನಿಧಾನವಾಗಿ ಲೆಕ್ಕಪತ್ರಗಳನ್ನು ನೋಡಿ ಯಾವುದೇ ತಪ್ಪುಗಳನ್ನು ತೋರಿಸಿದರೆ ಅಥವಾ ಯಾವುದೇ ಸ್ಪಷ್ಟೀಕರಣ ಬಯಸಿದರೂ ಅದನ್ನು ಸರಿಪಡಿಸಿ/ ನೀಡಿ ದಾಖಲಿಸಲಾಗುವುದು ಎಂದರು. ಹಾಗೆಯೇ 'ಸುನಾಮಿ' ಸಂತ್ರಸ್ತರ ಸಹಾಯಕ್ಕಾಗಿ ಅಂಚೆ ವೆಚ್ಚದಲ್ಲಿ ಉಳಿಸಿದ ರೂ. 8000ದ ಬದಲು ರೂ. 10.000 ನೀಡೋಣ ಎಂದರು.

ಲೆಕ್ಕಪತ್ರವನ್ನು ಸಂಪೂರ್ಣವಾಗಿ ಓದಿ ಹೇಳಬೇಕೆಂದು ಶ್ರೀ ಬಿ. ಎಸ್. ರಾಮಚಂದ್ರ ಅಪೇಕ್ಷಿಸಿದರು.

ಶ್ರೀ ನಾರಾಯಣ ಸ್ವಾಮಿಯವರು ವಿದ್ಯಾರ್ಥಿ ನಿಲಯದಿಂದ ನಗದು ಬಾಕಿ ರೂ. 9240.38 ಎಂದು ಸೂಚಿತವಾಗಿರುವುದನ್ನು ಪ್ರಸ್ತಾಪಿಸಿ ಕಾರಣ ಕೇಳಿದರು. ಉತ್ತರ ನೀಡಿದ ಅಧ್ಯಕ್ಷರು ಅಂದಿನ ಹಾಸ್ಟೆಲ್ ವಾರ್ಡನ್ ಶ್ರೀ ಹೆಚ್. ಎಸ್. ವೆಂಕಟೇಶ್ ಅವರಿಂದ ಬಾಕಿ ಇದೆ ಎಂದರಲ್ಲದೆ ಈ ಲೆಕ್ಕವು 2004-05ರ ಸಾಲಿನಲ್ಲಿ ಪಾವತಿಯಾಗಿದೆ ಎಂದರು.

ವಿದ್ಯಾರ್ಥಿನಿಲಯದ ವಿದ್ಯುಚ್ಛಕ್ತಿ ಬಾಬ್ತಿನಲ್ಲಿ ದಂಡದ ರೂಪದಲ್ಲಿ ರೂ. 30,000ದ ಬಗ್ಗೆ ಪ್ರಸ್ತಾಪಿಸಿದ ಶ್ರೀ ಹೆಚ್. ಎಸ್. ಜಗನ್ನಾಥ ಅವರಿಗೆ ಉತ್ತರವಾಗಿ ಈ ಹಣವನ್ನು ಕಂಟ್ರಾಕ್ಟರ್‌ನಿಂದ ವಸೂಲಿ ಮಾಡಲಾಗಿದೆ (ಅಂದರೆ ಅವರಿಗೆ ಕೊಡಬೇಕಾಗಿದ್ದ ಮೊತ್ತದಿಂದ ಈ ಮೊಬಲಗನ್ನು ಮುರಿದುಕೊಳ್ಳಲಾಗಿದೆ) ಎಂದರು. ಕಲ್ಯಾಣಮಂಟಪದ ಆವರಣದಲ್ಲಿರುವ ತೆಂಗಿನಮರಗಳಿಂದ ಆದಾಯ ಈಗ ಬರುತ್ತಿಲ್ಲ, ಏಕೆಂದರೆ ಅವುಗಳಿಗೆ ರೋಗ ಬಡಿದಿದೆ, ಸರಿಪಡಿಸಿದ ನಂತರ ಆದಾಯ ನಿರೀಕ್ಷಿಸಬಹುದು ಎಂದರು. ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತಾ, ಕಲ್ಯಾಣಮಂಟಪದ ಅಭಿವೃದ್ಧಿಗೆ ಸಂಘವು ಸದಾ ಶ್ರಮಿಸುವುದೆಂದೂ, ಹೆಚ್ಚು ಹೆಚ್ಚು ಜನರು ಕಲ್ಯಾಣ ಮಂಟಪವನ್ನು ಬಳಸಿದಷ್ಟೂ ವರಮಾನ ಮತ್ತು ಸ್ಥಿತಿಗತಿ ಸುಧಾರಿಸುತ್ತದೆ ಎಂದರು. ಇದಾದನಂತರ ಬಿ. ಎಸ್. ರಾಮಚಂದ್ರ ಮತ್ತು ಹೆಚ್. ಎಸ್. ಜಗನ್ನಾಥ ಅವರ

ಅನುಮೋದನೆಯೊಂದಿಗೆ 2003-2004ರ ಲೆಕ್ಕಪತ್ರ ಒಪ್ಪಿಗೆಯಾಯಿತು.

ಚರ್ಚೆ ಮುಕ್ತಾಯವಾದ ಬಳಿಕ ಬರುವ ಸಾಲಿಗಾಗಿ ಬಜೆಟನ್ನು ಅಧ್ಯಕ್ಷರು ಮಂಡಿಸಿದರು. ಅದಕ್ಕೆ ಸಭೆಯು ಅನುಮೋದನೆ ನೀಡಿತು.

ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ನೂತನ (ಪರಿಷ್ಕರಿಸಿದ) ವಿಳಾಸ ಪುಸ್ತಿಕೆಯನ್ನು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ 8ನೆಯ ಅಖಿಲ ಕರ್ನಾಟಕ ಬ್ರಾಹ್ಮಣ ಸಮ್ಮೇಳನದ ಯಶಸ್ವಿ ರೂವಾರಿಯಾದ ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯ ಹಾಗೂ ಗಾಯತ್ರೀ ರಥಯಾತ್ರೆಯ ಆರಂಭದಿಂದ ಮುಕ್ತಾಯದವರೆಗೆ ಎಲ್ಲ ಕಡೆ ಸಂಚರಿಸಿದ ಶ್ರೀ ಆರ್. ಎಲ್. ಮುರಳೀಧರ ಅವರುಗಳನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಬಿ.ಎನ್.ವಿ. ಅವರು ಕೌಂಡಿನ್ಯ ಗೋತ್ರದ ವಂಶವೃಕ್ಷದ ಅನಾವರಣ ಮಾಡಿದರು. ಹಾಗೆಯೇ ಉಭಯ ಸಂಕೇತಿ ಪಂಗಡದವರೂ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸುವುದರತ್ತ ಗಮನ ಹರಿಸಬೇಕೆಂದರು. ಸಂಘದ ಲೆಕ್ಕಪತ್ರಗಳ ಗಣಕೀಕರಣದಲ್ಲಿ ವಿಶೇಷವಾಗಿ ಸಹಾಯ ಸಲ್ಲಿಸುತ್ತಿರುವ ಶ್ರೀಮತಿ ವೀಣಾ ಮೂರ್ತಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಲಾಯಿತು.

ಶ್ರೀ ಬಿ.ಎನ್.ವಿ. ಅವರು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾದ (7ನೆಯ ತರಗತಿಯಿಂದ ಸಂಶೋಧನೆಯವರೆಗೆ) ವಿದ್ಯಾರ್ಥಿ ಬಾಂಧವರಿಗೆ ಪುರಸ್ಕಾರ ನೀಡಿ ಅಭಿನಂದಿಸಿದರು. ಆದರೆ ಹೆಚ್ಚಿನ ಪುರಸ್ಕೃತರು ಸಭೆಗೆ ಗೈರುಹಾಜರಾಗಿದ್ದು ಖೇದದ ವಿಷಯವಾಗಿತ್ತು.

**ಇತರೆ ವಿಷಯಗಳು :**

ಹಿರಿಯ ಸದಸ್ಯರಾದ ಶ್ರೀ ಆರ್. ಆರ್. ಹನಸೋಗೆಯವರು ಮೈಸೂರಿನಲ್ಲಿ ತಪ್ಪದಂತೆ ನಡೆಯುತ್ತಿರುವ ಸಂಘದ ವಾರ್ಷಿಕ ಸಭೆಗಳಿಗೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

ಶ್ರೀ ಬಿ. ಎಸ್. ಅನಂತ ಕೃಷ್ಣಪ್ಪ ಅವರು ಬೆಟ್ಟದಪುರದಲ್ಲಿ ಇದೇ ತಿಂಗಳ (ಫೆಬ್ರವರಿ) 24ರಂದು ಪ್ರಾರಂಭವಾಗಲಿರುವ ಬೆಟ್ಟದಪುರ ರಥೋತ್ಸವಕ್ಕೆ ಎಲ್ಲರಿಗೂ ಆಹ್ವಾನ ನೀಡಿದರು.

ಶ್ರೀ ಬಿ. ಎಸ್. ರಾಮಚಂದ್ರ ಅವರು ಮೈಸೂರು ಖಾಖೆಯ ಬಗ್ಗೆ ಮಾತನಾಡಿ ಶ್ರೀ ಆರ್. ಶಂಕರ್ ಅವರಿಂದ ರೂ. 30,000 ಬಾಕಿ ಬರಬೇಕೆಂದರು. ಅಧ್ಯಕ್ಷರು ಈ ವಿಷಯದ ಬಗ್ಗೆ ಮೈಸೂರು ಶಾಖೆಗೆ ಹಾಗೂ ಶ್ರೀ ಆರ್. ಶಂಕರ್ ಅವರಿಗೆ ಸೂಕ್ತ ಸೂಚನೆ ನೀಡಲಾಗುವುದು ಎಂದರು.





ನಂತರ ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಎಂ. ನರಸಿಂಹನ್ ಅವರು ಬಹಳ ಸಮಯದ ನಂತರ ಸಾವಧಾನದಿಂದ ಅಧ್ಯಕ್ಷ ಭಾಷಣ ಮಾಡುವ ಸಂದರ್ಭ ಒದಗಿ ಬಂದಿದ್ದಕ್ಕಾಗಿ ಸಂತಸ ವ್ಯಕ್ತಪಡಿಸಿದರು. ವೃದ್ಧಾಶ್ರಮದ ನಿರ್ಮಾಣ, ಸಂಘದ ವಜ್ರಮಹೋತ್ಸವ ಹಾಗೂ ವಿಶ್ವ ಸಂಕೇತಿ ಸಮ್ಮೇಳನ ನಡೆಸುವ ಯೋಜನೆ ಹೊಂದಿರುವ ಬಗ್ಗೆ ಪ್ರಸ್ತಾಪಿಸಿದರು. ಸಮ್ಮೇಳನದಲ್ಲಿ 2000ದಷ್ಟು ಬೆಟ್ಟದಪುರ ಸಂಕೇತಿಗಳನ್ನು ಒಂದೆಡೆ ಸೇರಿಸುವ ಆಶಯವನ್ನು ವ್ಯಕ್ತಪಡಿಸಿದರು.

ಸುಮಾರು 200 ಮಂದಿ ಸದಸ್ಯರು ಹಾಜರಿದ್ದ ಈ ಸಭೆಯು ಶ್ರೀ ಎಂ. ಕೆ. ಸುರೇಶ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಇಡೀ ಕಾರ್ಯಕ್ರಮದ ನಿರೂಪಣೆಯನ್ನು ತಮ್ಮ ಸುಲಲಿತ ಶೈಲಿಯಲ್ಲಿ ನಿರ್ವಹಿಸಿದ ಶ್ರೀಮತಿ ಲಲಿತಾ ಶ್ರೀನಿವಾಸನ್ ಅವರು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಸಭೆಯ ನಂತರ ಭೋಜನದ ವ್ಯವಸ್ಥೆಯಿತ್ತು. ★

## ಮೈಸೂರು ವಿದ್ಯಾರ್ಥಿ ನಿಲಯದಲ್ಲಿ ಗಣರಾಜ್ಯೋತ್ಸವ ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸರ 108ನೇ ಜನ್ಮದಿನೋತ್ಸವ

ದಿನಾಂಕ ಜನವರಿ 26 2005ರಂದು ಗಣರಾಜ್ಯೋತ್ಸವ ಅಂಗವಾಗಿ ನಿಲಯದ ಆವರಣದಲ್ಲಿ ಸರಿಯಾಗಿ ಬೆಳಿಗ್ಗೆ 9.30 ಘಂಟೆಗೆ ನಿಲಯದ ಪಾಕಶಾಲೆ ಭಟ್ಟರಾದ ಶ್ರೀ ಕೆ. ಶ್ರೀನಿವಾಸ್‌ಮೂರ್ತಿಯವರಿಂದ ಧ್ವಜಾರೋಹಣವನ್ನು ನೆರವೇರಿಸಲಾಯಿತು. ನಂತರ ರಾಷ್ಟ್ರಗೀತೆಯೊಂದಿಗೆ ಧ್ವಜವಂದನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ರಾಷ್ಟ್ರದ ನೇತಾರ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಚೇತನ ದಿ|| ಸುಭಾಷ್ ಚಂದ್ರಬೋಸರ ದಿವ್ಯಸ್ಮರಣೆ ಕುರುಹಾಗಿ ಅವರ 108ನೇ ಜನ್ಮ ದಿನೋತ್ಸವವನ್ನು ಆಚರಿಸಲಾಯಿತು. ಹಾಗೂ ಕೇಂದ್ರದ ಜಂಟಿ ಕಾರ್ಯದರ್ಶಿ ಡಾ|| ಹೆಚ್. ಎನ್. ಸುರೇಶ್‌ರವರಿಂದ ನೇತಾಜಿ ಸುಭಾಷರ ಭಾವ ಚಿತ್ರವು ಅನಾವರಣಗೊಳಿಸಲ್ಪಟ್ಟಿತು. ಡಾ|| ಸುರೇಶ್‌ರವರು ತಮ್ಮ ಸಂಗ್ರಹದಿಂದ ಬೋಸ್‌ರವರ INA ಚಟುವಟಿಕೆಯ ಅಪರೂಪದ ಛಾಯಾ ಚಿತ್ರಗಳನ್ನು ಮತ್ತು ಕೆಲವು ಐತಿಹಾಸಿಕ ದಾಖಲೆಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ಬಹಳ ಕುತೂಹಲದಿಂದ ವೀಕ್ಷಿಸಿದರು. ಸಿಹಿ ವಿತರಣೆಯೊಂದಿಗೆ, ಸಮಾರಂಭವು ಮುಕ್ತಾಯವಾಯಿತು.

ವರದಿ : **ಡಾ|| ಹೆಚ್. ಎನ್. ಸುರೇಶ್**
ಜಂಟಿ ಕಾರ್ಯದರ್ಶಿ

## ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್

16, 1ನೇ 'ಎ' ಅಡ್ಡರಸ್ತೆ, ಜೆ. ಪಿ. ನಗರ 2ನೇ ಹಂತ, ಬೆಂಗಳೂರು - 78. ದೂ : 26593454

**2005 ಮೇ 11ರಿಂದ 15ರವರೆಗೆ ರುದ್ರಪಟ್ಟಣದಲ್ಲಿ ವೇದನಾದೋತ್ಸವ**

**''ಮೇ 14ರ ಬೆಳಿಗ್ಗೆ 7ರಿಂದ 15ರ ಬೆಳಿಗ್ಗೆ 7 ರವರೆಗೆ ಅಖಂಡ ಸಂಗೀತ ಸೇವೆ''**

ನಿಮ್ಮ ಚೆಕ್‌ಗಳು ''**ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್**'' ಹೆಸರಿನಲ್ಲೇ ಇರತಕ್ಕದ್ದು. ಮಿಕ್ಕ ವಿವರಳಿಗೆ ನಮ್ಮನ್ನು ಸಂಪರ್ಕಿಸಬಹುದು.

| | |
|---|---|
| **ಆರ್. ಎಸ್. ಭಾಸ್ಕರ ಅವಧಾನಿ - 23489952** | **ಆರ್.ಎಲ್ ಕೃಪಾ - 26697141** |
| **ಆರ್. ಎಲ್. ಮಂಜುನಾಥ - 26520938** | **ಆರ್.ಹೆಚ್.ವಿಶ್ವನಾಥ - 08175-225237** |
| **ಆರ್.ವಿ. ವಸಂತಕುಮಾರ್ - 23396551** | **ಆರ್.ಕೆ. ಕೇಶವಮೂರ್ತಿ - 9582156677** |

ನಿಮ್ಮ ದೇಣಿಗೆಗೆ ಆದಾಯ ತೆರಿಗೆ ವಿನಾಯಿತಿ ಲಭ್ಯವಿದೆ.

ನಿಮ್ಮ ಸಂಪೂರ್ಣ ಬೆಂಬಲ, ಪ್ರೋತ್ಸಾಹ ನಿರೀಕ್ಷಿಸುವ,
ಗಾನಕಲಾಭೂಷಣ
**ವಿದ್ವಾನ್ ಆರ್. ಕೆ. ಪದ್ಮನಾಭ**
**ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್**
**ಪ್ರಧಾನ ವಿಶ್ವಸ್ಥರು**
**26593454 / 9448574894**

**ಮುಂದಿನ ವಿವರಗಳನ್ನು ನಿರೀಕ್ಷಿಸಿ!!!**

### ವಧು ಬೇಕಾಗಿದೆ

**ವರನ ವಿವರ**

ಗೋತ್ರ : ಕೌಶಿಕ
ನಕ್ಷತ್ರ : ಪುಬ್ಬ
ವಯಸ್ಸು : 31 ವರ್ಷ
ಎತ್ತರ : 5.7''
ವಿದ್ಯಾರ್ಹತೆ : Diploma in Elec.
ಉದ್ಯೋಗ : ಸ್ವಂತ ವ್ಯಾಪಾರ
ನಿರೀಕ್ಷೆ : PUC, ಒಳ್ಳೆಯ ಮನೆತನ, ವಯಸ್ಸು 26-27
ಸಂಪರ್ಕಿಸಿ : 0821 - 2483242, Mobile : 93421 88405





# DEPARTMENT OF POSTS, INDIA

Sub : Postal Services in Bangalore City

| Postal Services | Bangalore GPO | Basavanagudi HPO | Jayanagar HPO |
|---|---|---|---|
| **Enquiry** | 2266772 | 26613930 | 26340303 |
| **Speed Post** | 2861435 | 26613964 | 26557644 |
| **Customer Care Centre** | 2863434 | 26608366 | 26631004 |
| **Western Union Money Transfer** | 2865660 | 26617600 | 26340303 |
| **Philately** | 2863434 | 26617600 | 26340303 |

Customer Care Centre Bangalore South : Division 26539722

Express Parcel Post : 2268323 / 2382670

Business Post : 5595363 / 6509837

# MANU SATYA HORO CENTRE

**Horoscope - Reading and Palm Reading, Numerology done here.**

**Predictions will be given through planetory aspects.**

**Prediction printouts will be charged extra.**

***Working Hours :***
**11 a.m. to 1.00 p.m.**
**5.00 p.m. to 7.00 p.m.**

***For details contact :***

**H. K. SATYAPRAKASH**
**No. 146, Raghavendra Block, 15th Main Road,**
**Kalidasa Layout, Srinagar, Bangalore - 560 050.**

**NATURE CURE CONSULTANT**

**DO YOU WANT TO GET RID OF TENSION, ACIDITY, ANXIETY AND GASTRIC TROUBLE ETC...**

**Contact the above person personally.**

**Stop eating "POLISHED RICE" Start eating "UNPOLISHED RICE" (With Fibre) and be Free from all types of diseases including blood sugar and blood pressure.**

**Stop pouring the hard earned money to Doctors, Be healthy for ever.**

**Cell No. :**
**9886334667, 9844125411**

**E-mail : astrosatya@indiatimes.com**







# PRITHVI COMPUTER NETWORKS

**# 448/A, 8th Main, 7th Cross, Ta.Ra.Su. Road,**
**Hanumanthanagr, Bangalore - 560 019.**
**Ph : 9845458216**

## Computer Courses

* **Basic Computer Courses for beginners**
* **Courses are conducted in a non-commercial way**
* **Guidance for academic projects for B.Sc Computer Science and BCA students are provided.**

***Contat :***

**Srikanth : 9886072371 Arun : 9845458216**

***With Best Compliments from :***

# VEENA SCREEN PRINTERS

**B. S. Adishesha**
**"Vishesha", No. 60, Dee-Enclave, Maruthinagar,**
**Kodigehalli Main Road, Sahakaranagar P.O.,**
**Bangalore - 560 092.**

**Ph : (O) 23620877, (R) 23620866, (M) 94482 - 05568**

**ಎಂ. ಎಸ್. ಸುಬ್ರಾವ್** **ದೂ : 56697059**
ವ್ಯವಸ್ಥಾಪಕರು

# ವೈದೀಕ ಧಾರ್ಮಿಕ ಕೇಂದ್ರ

ನಂ. 1078, 3ನೇ 'ಬಿ' ಮುಖ್ಯರಸ್ತೆ, 2ನೇ ಹಂತ, 'ಇ' ಬ್ಲಾಕ್, ರಾಜಾಜಿನಗರ,
ಸಾಯಿ ಕ್ಲಿನಿಕ್ ಹತ್ತಿರ, ಬೆಂಗಳೂರು - 560 010.